ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಜನವರಿ 13, 2022

ಸಂಪುಟ : 48 ಸಂಚಿಕೆ : 243 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com

# ಪಾದಯಾತ್ರೆ ನಿರ್ಬಂಧಿಸಿ ಆದೇಶ

## ನ್ಯಾಯಾಲಯದ ಸೂಚನೆಗೆ ಎಚ್ಚೆತ್ತ ಸರ್ಕಾರ

ಬೆಂಗಳೂರು, ಜ. 12 – ಕಾಂಗ್ರೆಸ್ ನಡೆಸುತ್ತಿರುವ ಮೇಕೆದಾಟು ಪಾದಯಾತ್ರೆಯನ್ನು ತಡೆಯಲು ಆದೇಶ ಹೊರಡಿಸಿರುವ ರಾಜ್ಯ ಸರ್ಕಾರ, ಯಾತ್ರೆಗಾಗಿ ಜನರು ಬರುವುದರ ಹಾಗೂ ವಾಹನಗಳನ್ನು ತರುವುದರ ಮೇಲೆ ನಿಷೇಧ ಹೇರಿದೆ.

ಪಾದಯಾತ್ರೆಗಾಗಿ ಬೇರೆ ಜಿಲ್ಲೆಗಳಿಂದ ರಾಮನಗರ ಜಿಲ್ಲೆಗೆ ಬರುವುದನ್ನು ತಡೆಯಬೇಕು. ಜಿಲ್ಲೆಯಲ್ಲೂ ಸಹ ಜನರು ಪಾದಯಾತ್ರೆಗಾಗಿ ಬರುವುದನ್ನು ತಡೆಯಬೇಕು ಎಂದು ಮುಖ್ಯ ಕಾರ್ಯದರ್ಶಿ ರವಿ ಕುಮಾರ್ ಆದೇಶ ಹೊರಡಿಸಿದ್ದಾರೆ.

ಈ ಬಗ್ಗೆ ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳು, ಪೊಲೀಸ್ ಆಯುಕ್ತರು ಕಟ್ಟುಟ್ಟನಿಟ್ಟಿನ ಕ್ರಮ ತೆಗೆದುಕೊಳ್ಳಬೇಕೆಂದು ಅವರು ಸೂಚಿಸಿದ್ದಾರೆ.

ಕಾಂಗ್ರೆಸ್ ನಡೆಸುತ್ತಿರುವ ನಮ್ಮ ನೀರು ನಮ್ಮ ಹಕ್ಕು ಪಾದಯಾತ್ರೆ ಅಥವಾ ಈ ಬೇರೆ ಯಾವುದೇ ಹೆಸರಿನಲ್ಲಿ ನಡೆಸುತ್ತಿರುವ ಯಾತ್ರೆಗೆ ವಾಹನಗಳನ್ನು ತರುವುದರ ಹಾಗೂ ಜನರು ಬರುವುದರ ಮೇಲೆ ನಿರ್ಬಂಧ ಹೇರಬೇಕು ಎಂದು ಸರ್ಕಾರದ ಆದೇಶದಲ್ಲಿ ತಿಳಿಸಾಗಿದೆ.

ಜನವರಿ 31ರವರೆಗೆ ಯಾವುದೇ ರೀತಿಯ ಧರಣಿ ಹಾಗೂ ಪ್ರತಿಭಟನೆಗಳನ್ನು ನಡೆಸುವುದರ ಮೇಲೆ ರಾಜ್ಯ ಸರ್ಕಾರ ನಿಷೇಧ ಹೇರಿದೆ. ಇಷ್ಟಾದರೂ ಕಾಂಗ್ರೆಸ್ ಕಳೆದ ನಾಲ್ಕು ದಿನಗಳಿಂದ ಬೃಹತ್ ಪಾದಯಾತ್ರೆ ನಡೆಸುತ್ತಿದೆ.

ಸರ್ಕಾರದ ಆದೇಶ ಉಲ್ಲಂಘಿಸಿ ಯಾತ್ರೆ ನಡೆಸುತ್ತಿರುವುದರಿಂದ ದೊಡ್ಡ ಪ್ರಮಾಣದಲ್ಲಿ ಜನರ ಜೀವಕ್ಕೆ ಅಪಾಯವಾಗಲಿದೆ. ರಾಜ್ಯದಲ್ಲಿ ಉಂಟಾಗಿರುವ ಕೊರೊನಾ ಪರಿಸ್ಥಿತಿ ಮತ್ತಷ್ಟು ಉಲ್ಬಣವಾಗಲಿದೆ ಎಂದು ಆದೇಶದಲ್ಲಿ ಹೇಳಲಾಗಿದೆ.

ಈ ಆದೇಶವನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯ ವಿರುದ್ಧ ವಿಕೋಪ ನಿರ್ವಹಣೆ ಕಾಯ್ದೆ, ಸಂಬಂಧಿಸಿದ ಐ.ಪಿ.ಸಿ. ಸೆಕ್ಷನ್‌ಗಳು ಹಾಗೂ ಇತರೆ ಕಾನೂನುಗಳ ಅನ್ವಯ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕೊರೊನಾ ನಿರ್ಬಂಧಗಳನ್ನು ಉಲ್ಲಂಘಿಸಿ ಕಾಂಗ್ರೆಸ್ ನಡೆಸುತ್ತಿರುವ ಪಾದಯಾತ್ರೆಗೆ ಅವಕಾಶ ನೀಡಿರುವುದೇಕೆ ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ತೀವ್ರ ತರಾಟೆಗೆ ತೆಗೆದುಕೊಂಡ ನಂತರ ನಿರ್ಬಂಧದ ಆದೇಶ ಹೊರಡಿಸಲಾಗಿದೆ.

ಪಾದಯಾತ್ರೆಗಾಗಿ ಸರ್ಕಾರದಿಂದ ಅನುಮತಿ ಪಡೆಯಲಾಗಿದೆಯೇ ಎಂದ ಕಾಂಗ್ರೆಸ್ ಪಕ್ಷವನ್ನೂ ಹೈಕೋರ್ಟ್ ಪ್ರಶ್ನಿಸಿತ್ತು. ಸರ್ಕಾರ ಹಾಗೂ ಕಾಂಗ್ರೆಸ್ ಈ ಬಗ್ಗೆ ಶುಕ್ರವಾರದ ಒಳಗೆ ಉತ್ತರಿಸುವಂತೆ ನ್ಯಾಯಾಲಯ ಹೇಳಿದೆ.

## ಚಾಟಿ ಬೀಸಿದ ಹೈಕೋರ್ಟ್

ಬೆಂಗಳೂರು, ಜ. 12 - ಮೇಕೆದಾಟು ಯೋಜನೆಗೆ ಆಗ್ರಹಿಸಿ ಪ್ರದೇಶ ಕಾಂಗ್ರೆಸ್ ನಡೆಸುತ್ತಿರುವ ಪಾದಯಾತ್ರೆ ತಡೆಯಲು ನೀವು ಅಸಮರ್ಥರಾಗಿದ್ದೀರಾ ಎಂದು ರಾಜ್ಯ ಸರ್ಕಾರವನ್ನು ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿದೆ.

**ಪಾದಯಾತ್ರೆಗೆ ಯಾರಿಂದ ಅನುಮತಿ ಪಡೆದಿದ್ದೀರಿ? ಎಂದು ಕಾಂಗ್ರೆಸ್‌ಗೆ ಪ್ರಶ್ನಿಸಿರುವ ನ್ಯಾಯಾಲಯ, ಪಾದಯಾತ್ರೆ ತಡೆಗೆ ಅಸಮರ್ಥರಾಗಿದ್ದೀರಾ ಎಂದು ಸರ್ಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ.**

ಪಾದಯಾತ್ರೆಗೆ ಸಾರ್ವಜನಿಕವಾಗಿ ವಿರೋಧವಿದ್ದರೂ, ಅನುಮತಿ ನೀಡಿ, ಇದೀಗ ಸುಮ್ಮನಿದ್ದೀರಾ ಎಂದು ಚಾಟಿ ಬೀಸಿರುವುದಲ್ಲದೆ, ಕೊರೊನಾ ಸಾಂಕ್ರಾಮಿಕ ದೊಡ್ಡ ಪ್ರಮಾಣದಲ್ಲಿ ಹರಡುತ್ತಿರುವಾಗ ನೀವು, ಈ ಪಾದಯಾತ್ರೆ ನಡೆಸುತ್ತಿರುವುದು ಏತಕ್ಕೆ? ಎಂದು ರಾಜ್ಯ ಕಾಂಗ್ರೆಸ್ ಅನ್ನು ಪ್ರಶ್ನೆ ಮಾಡಿದೆ.

ನೀವು ಪಾದಯಾತ್ರೆಗೆ ಯಾರಿಂದ ಅನುಮತಿ ಪಡೆದಿದ್ದೀರಿ? ಎಂದು ಕಾಂಗ್ರೆಸ್‌ಗೆ ಪ್ರಶ್ನಿಸಿರುವ ನ್ಯಾಯಾಲಯ, ಕೋವಿಡ್ ಮಾರ್ಗಸೂಚಿಯನ್ನು ಯಾಕೆ ಪಾಲನೆ ಮಾಡಿಲ್ಲ ಎಂದು ಖಾರವಾಗಿ ಪ್ರಶ್ನಿಸಿದೆ. ಎ.ವಿ. ನಾಗೇಂದ್ರ ಅವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಯನ್ನು ಕೈಗೆತ್ತಿಕೊಂಡ ಮುಖ್ಯನ್ಯಾಯ ಮೂರ್ತಿ ಋತುರಾಜ್ ಅವಸ್ತಿ ನೇತೃತ್ವದ ವಿಭಾ ಗೀಯ ಪೀಠ ಸರ್ಕಾರ ಮತ್ತು ಕಾಂಗ್ರೆಸ್ ಅನ್ನು (2ನೇ ಪುಟಕ್ಕೆ)



## ನಿವೇಶನಗಳ ಸ್ವಚ್ಛತಾ ದಂಡ ಶುರು

**ಖಾಲಿ ನಿವೇಶನ ಸ್ವಚ್ಛಗೊಳಿಸಿ ದಂಡ ವಿಧಿಸುವ ಪ್ರಕ್ರಿಯೆಗೆ ಪಾಲಿಕೆ ಮೇಯರ್ ಚಾಲನೆ**

ದಾವಣಗೆರೆ, ಜ.12- ನಗರದಲ್ಲಿರುವ ಖಾಲಿ ನಿವೇಶನಗಳನ್ನು ಸ್ವಚ್ಛಗೊಳಿಸಿ, ಮಾಲೀಕರಿಗೆ ದಂಡ ವಿಧಿಸುವ ಪ್ರಕ್ರಿಯೆಗೆ ಮಹಾನಗರ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಬುಧವಾರ ಚಾಲನೆ ನೀಡಿದರು.

ಕಸ ತುಂಬಿದ, ಗಿಡ ಗಂಟೆಗಳು ಬೆಳೆದ ಖಾಲಿ ನಿವೇಶನಗಳಿಂದ ನಗರದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿತ್ತಲ್ಲದೆ, ನಗರದ ಸೌಂದರ್ಯಕ್ಕೂ ಧಕ್ಕೆಯಾಗುತ್ತಿತ್ತು.

ಈ ಬಗ್ಗೆ ಅನೇಕ ಬಾರಿ ನಿವೇಶನಗಳನ್ನು ಸ್ವಚ್ಛಗೊಳಿಸುವಂತೆ ನೋಟೀಸ್ ನೀಡಿದ್ದರೂ, ಪತ್ರಿಕಾ ಪ್ರಕಟಣೆಗಳ ಮೂಲಕ ಮನವಿ ಮಾಡಿದ್ದರೂ ನಿವೇಶನಗಳ ಸ್ವಚ್ಛತೆಗೆ ಮಾಲೀಕರು ಮುಂದಾಗಿರಲಿಲ್ಲ. ಈ ಬಗ್ಗೆ ಸಾರ್ವಜನಿಕರ ದೂರುಗಳು ಹೆಚ್ಚಾದ ಹಿನ್ನೆಲೆಯಲ್ಲಿ ಪಾಲಿಗೆ ಇಂತಹದ್ದೊಂದು (2ನೇ ಪುಟಕ್ಕೆ)

## ಎಎಸ್ಪಿಯಾಗಿ ರಾಮಗೊಂಡ ಬಸರಗಿ



ದಾವಣಗೆರೆ, ಜ.12- ಜಿಲ್ಲಾ ನೂತನ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾಗಿ ರಾಮಗೊಂಡ ಬಸರಗಿ ಇಂದು ಅಧಿಕಾರ ವಹಿಸಿಕೊಂಡರು.

1994ನೇ ಸಾಲಿನಲ್ಲಿ ಪಿಎಸ್ಐ ಆಗಿ ಇಲಾಖೆಗೆ ಸೇರಿದ್ದಾರೆ. ಡಿವೈಎಸ್ಪಿ ಆಗಿ ಸಿಐಡಿ ಬೆಂಗಳೂರು, ಯಾದಗಿರಿ, ಅಥಣಿಯಲ್ಲಿ ಸೇವೆ ಸಲ್ಲಿಸಿದ್ದು, ಡಿವೈಎಸ್ಪಿ ಹುದ್ದೆಯಿಂದ ಪದೋನ್ನತಿ ಹೊಂದಿ ಎಸ್ಪಿ ಎಸಿಬಿ, ಕೇಂದ್ರ ಕಛೇರಿ, ಹುಬ್ಬಳಿ-ಧಾರವಾಡ ಕಮಿಷನರೇಟ್ ನಲ್ಲಿ ಡಿಸಿಪಿ ಕ್ರೈಂ ಮತ್ತು ಟ್ರಾಫಿಕ್ ಆಗಿ ಸೇವೆ ಸಲ್ಲಿಸಿದ್ದಾರೆ. (2ನೇ ಪುಟಕ್ಕೆ)

## ದಾವಣಗೆರೆ ಜಿಲ್ಲೆಯಲ್ಲಿ 137 ಜನರಿಗೆ ಪಾಸಿಟಿವ್

ದಾವಣಗೆರೆ, ಜ.12- ಜಿಲ್ಲೆಯಲ್ಲಿ ಬುಧವಾರ 137 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟ ಬಗ್ಗೆ ವರದಿಯಾಗಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 282ಕ್ಕೆ ಏರಿಕೆಯಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 65, ಹರಿಹರ 1, ಜಗಳೂರು 16, ಚನ್ನಗಿರಿ 50, ಹೊನ್ನಾಳಿ 1 ಹಾಗೂ ಹೊರ ಜಿಲ್ಲೆಯ ನಾಲ್ವರಲ್ಲಿ ಸೋಂಕು ಕಾಣಿಸಿಕೊಂಡಿದೆ. ಮೂವರು ಗುಣಮುಖರಾಗಿದ್ದಾರೆ. (3ನೇ ಪುಟಕ್ಕೆ)



## ವಿವೇಕರು ಯುವಕರಿಗೆ ಸ್ಫೂರ್ತಿ

**ಎಸ್ಪಿ ಸಿ.ಬಿ.ರಿಷ್ಯಂತ್**

ದಾವಣಗೆರೆ, ಜ. 12- ಭಾರತ ಅಷ್ಟೇ ಅಲ್ಲದೆ, ವಿಶ್ವದಲ್ಲಿಯೇ ಯುವಜನತೆಯನ್ನು ತನ್ನತ್ತ ಸೆಳೆದ ಯೂತ್ ಐಕಾನ್ ಸ್ವಾಮಿ ವಿವೇಕಾನಂದರು ಓರ್ವ ಅತ್ಯುತ್ತಮ ವಾಗ್ಮಿಯಾಗಿದ್ದರು ಎಂದು ಜಿಲ್ಲಾ ಎಸ್ಪಿ ಸಿ.ಬಿ. ರಿಷ್ಯಂತ್ ಹೇಳಿದರು.

ನಗರದ ರಾಮಕೃಷ್ಣ ಆಶ್ರಮದಲ್ಲಿ ಬುಧವಾರ ರಾಷ್ಟ್ರೀಯ ಯುವ ದಿನ ನಿಮಿತ್ತ ಏರ್ಪಡಿಸಿದ್ದ ವಿವೇಕ ಚಿತ್ರ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಕೇವಲ ಹಣ, ಶ್ರೀಮಂತಿಕೆ, ಕೌಟುಂಬಿಕ ಹಿನ್ನೆಲೆ ಇದ್ದರೆ ಮಾತ್ರ ಜೀವನ ಅಲ್ಲ. ಅದರಿಂದಲೇ ಗುರುತಿಸಿಕೊಳ್ಳಬೇಕು ಎಂದೇನೂ ಅಲ್ಲ, ಜ್ಞಾನ ಸಂಪಾದನೆಯಿಂದ ವಿಶ್ವದಲ್ಲಿಯೇ ಗುರುತಿಸಿಕೊಳ್ಳ ಬಹುದು ಎಂಬುದಕ್ಕೆ ವಿವೇಕಾನಂದರು ಸ್ಫೂರ್ತಿ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ದಾವಣಗೆರೆ ವಿವಿ ರಿಜಿಸ್ಟ್ರಾರ್ ಗಾಯತ್ರಿ ದೇವರಾಜ್ ಮಾತನಾಡಿ, 39 ವರ್ಷ ಬದುಕಿದ್ದ ವಿವೇಕಾನಂದರು ಚಿಕ್ಕ ವಯಸ್ಸಿನಲ್ಲಿಯೇ ಪ್ರಪಂಚವೇ ತನ್ನತ್ತ ತಿರುಗಿ ನೋಡುವಷ್ಟು ಸಾಧನೆ ಮಾಡಿದರು, ಜ್ಞಾನ ಸಂಪಾದಿಸಿದ್ದರು. ಯುವ ನಾಯಕರಾಗಿದ್ದ ಇವರು ಜ್ಞಾನದ ಜತೆ ದೈಹಿಕ ಕ್ಷಮತೆ ಕೂಡ (2ನೇ ಪುಟಕ್ಕೆ)

## ಶಾಲಾ - ಕಾಲೇಜು ಬಂದ್ ಕುರಿತು 19ರಂದು ತೀರ್ಮಾನ

ಬೆಂಗಳೂರು, ಜ.12 - ರಾಜ್ಯದಲ್ಲಿ ಕೋವಿಡ್ ದಿನದಿಂದ ದಿನಕ್ಕೆ ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಶಾಲಾ-ಕಾಲೇಜುಗಳನ್ನು ಬಂದ್ ಮಾಡುವ ಸಂಬಂಧ ಜನವರಿ 19 ರಂದು ಸರ್ಕಾರ ತೀರ್ಮಾನ ಕೈಗೊಳ್ಳಲಿದೆ ಎಂದು ಪ್ರಾಥಮಿಕ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನವರಿ 19 ರಂದು ಈ ವಿಚಾರದ ಬಗ್ಗೆ ತಜ್ಞರೊಟ್ಟಿಗೆ ಸಭೆ ನಡೆಸುತ್ತಿದ್ದು, ಅವರು ನೀಡುವ ಮಾರ್ಗದರ್ಶನದಂತೆ ಸರ್ಕಾರ ನಡೆದುಕೊಳ್ಳುತ್ತದೆ.

ಸದ್ಯಕ್ಕೆ ರಾಜ್ಯದಲ್ಲಿ ಯಾವುದೇ (2ನೇ ಪುಟಕ್ಕೆ)

## ಹೊಸ ಯುವ ನೀತಿ: ಸಿಎಂ

ಬೆಂಗಳೂರು, ಜ.12 - ಸರ್ಕಾರ ಹೊಸ ಯುವ ನೀತಿಯನ್ನು ತರಲು ಉದ್ದೇಶಿಸಿದ್ದು, ಮುಂಬರುವ ವರ್ಷಗಳಲ್ಲಿ ಈ ನೀತಿ ಯುವಕರಿಗೆ ಮಾದರಿ ರೀತಿಯಲ್ಲಿ ಮಾರ್ಗದರ್ಶನ ನೀಡಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಅವರು ಇಂದು ಸ್ವಾಮಿ ವಿವೇಕಾನಂದರ 159 ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ವರ್ಚುಯಲ್ ಆಗಿ ಭಾಗವಹಿಸಿ ಮಾತನಾಡಿದರು.

ಯುವಕರಿಗಾಗಿ ತತ್ವಾಧಾರಿತವಾದಂತಹ ವೈಚಾರಿಕೆ ನೆಲೆಯಲ್ಲಿ ಹೆಚ್ಚಿನ ಬೆಂಬಲ, ಪ್ರೋತ್ಸಾಹ ನೀಡಲು ಸರ್ಕಾರ ಸಿದ್ಧವಿದೆ. ಈ ದಿಸೆಯಲ್ಲಿ ವಿಶೇಷ ಯೋಜನೆಯೊಂದನ್ನು ಮುಂದಿನ ಆಯವ್ಯಯದಲ್ಲಿ ತರಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದರು. ನಮ್ಮ (2ನೇ ಪುಟಕ್ಕೆ)

## ಉಜ್ಜಯಿನಿ ದೇವಸ್ಥಾನಕ್ಕೆ ಪ್ರಕಾಶರಾವ್ ಆಡಳಿತಾಧಿಕಾರಿ

ಹರಪನಹಳ್ಳಿ, ಜ.12 - ಕೊಟ್ಟೂರು ತಾಲ್ಲೂಕಿನ ಉಜ್ಜಯಿನಿ ಗ್ರಾಮದ ಶ್ರೀ ಮರುಳಸಿದ್ದೇಶ್ವರ ಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿಯಾಗಿ ಉಪವಿಭಾಗಾಧಿಕಾರಿ ಪ್ರಕಾಶರಾವ್ ಬುಧವಾರ ಅಧಿಕಾರ ವಹಿಸಿಕೊಂಡಿದ್ದು, ದೇವಸ್ಥಾನದ ಸೂಚನಾ ಫಲಕಕ್ಕೆ ಈ ಕುರಿತ ಆದೇಶದ ಪ್ರತಿಯನ್ನು ಅಂಟಿಸಲಾಗಿದೆ.

ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲ್ಲೂಕು ಉಜ್ಜಯಿನಿ ಗ್ರಾಮದ ಐತಿಹಾಸಿಕ ಶ್ರೀ ಮರುಳಸಿದ್ದೇಶ್ವರ ಸ್ವಾಮಿ ದೇವಸ್ಥಾನ ಮೂದಲಿನಿಂದಲೂ ಹಿಂದೂ ಧಾರ್ಮಿಕ ದತ್ತಿ ಇಲಾಖೆಗೆ ಒಳಪಟ್ಟಿದ್ದು, ಇದುವರೆಗೆ ಆಡಳಿತಾಧಿಕಾರಿ ನೇಮಕವಾಗಿರಲಿಲ್ಲ. ಅದರೆ 2021ರ ಡಿ.15 ರಂದು ಮುಜರಾಯಿ ಇಲಾಖೆ ದೇವಸ್ಥಾನದ ಆಡಳಿತಾಧಿಕಾರಿ ನೇಮಿಸಿ ಆದೇಶ ಹೊರಡಿಸಿತ್ತು.

## ನಿಗದಿತ ಗಡುವು : ದಂತ ವೈದ್ಯಕೀಯ ಸ್ನಾತಕೋತ್ತರ ನೇಮಕಕ್ಕೆ ಸುಪ್ರೀಂ ಪ್ರಶ್ನೆ

ನವದೆಹಲಿ ಜ. 12 – ದಂತ ವೈದ್ಯಕೀಯ ಸ್ನಾತಕೋತ್ತರ (ಎಂ.ಡಿ.ಎಸ್.) ವಿದ್ಯಾರ್ಥಿಗಳ ಪ್ರವೇಶಾತಿಯನ್ನು ನಿಗದಿತ ಗಡುವು ಮೀರಿ ಕೈಗೊಂಡಿರುವ ಬಗ್ಗೆ ಉತ್ತರಿಸುವಂತೆ ಕರ್ನಾಟಕ ವೈದ್ಯಕೀಯ ಶಿಕ್ಷಣ ಕಾರ್ಯದರ್ಶಿಗೆ ಸುಪ್ರೀಂ ಕೋರ್ಟ್ ತಿಳಿಸಿದೆ. 633 ವಿದ್ಯಾರ್ಥಿಗಳ ಭವಿಷ್ಯ ತೂಗುಯ್ಯಾಲೆಗೆ ಸಿಲುಕಿರುವ ಹಿನ್ನೆಲೆಯಲ್ಲಿ ನ್ಯಾಯಾಲಯ ಈ ಸೂಚನೆ ನೀಡಿದೆ.

ನವೆಂಬರ್ 20, 2021ರ ಗಡುವು ಮೀರಿದ ನಂತರ (3ನೇ ಪುಟಕ್ಕೆ)

ಸವಿನೆನಪು



ಶ್ರೀಮತಿ ಪ್ರೀತಿ ರವಿಕುಮಾರ್
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಆರೈಕೆ ಆಸ್ಪತ್ರೆ, ಹದಡಿ ರಸ್ತೆ, ದಾವಣಗೆರೆ.
ನಿಧನ : 15.01.2021
ನೀವು ನಮ್ಮನ್ನಗಲಿ ಒಂದು ವರ್ಷವಾಯಿತು.
ಸದಾ ನಿಮ್ಮ ಸ್ಮರಣೆಯಲ್ಲಿ...
ಆರೈಕೆ ಆಸ್ಪತ್ರೆ ಮತ್ತು ಸಿಬ್ಬಂದಿ ವರ್ಗ
ಆರೈಕೆ ಆಗ್ರೋ ಫುಡ್ ಇಂಡಸ್ಟ್ರೀಸ್
ಮತ್ತು ಸಿಬ್ಬಂದಿ ವರ್ಗ, ಸಮಸ್ತ ಬಂಧು-ಮಿತ್ರರು

ಆನಗೋಡು ಗ್ರಾಮದ ಕಿತ್ತಲಮನಿ ಸಿದ್ದಪ್ಪ ನಿಧನ



ದಾವಣಗೆರೆ ತಾಲ್ಲೂಕು ಆನಗೋಡು ಗ್ರಾಮದ ಹಿರಿಯರಾದ
ಶ್ರೀ ಕಿತ್ತಲಮನಿ ಸಿದ್ದಪ್ಪ (85 ವರ್ಷ)
ಅವರು ದಿನಾಂಕ 12.01.2022ರ ಬುಧವಾರ ಸಾಯಂಕಾಲ 5 ಗಂಟೆಗೆ ನಿಧನರಾದರು. ಪತ್ನಿ, ಐವರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 13.01.2022ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಆನಗೋಡು ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಲಿದೆ.
ದುಃಖತಪ್ತರು:
ಮೃತರ ಪತ್ನಿ ಶ್ರೀಮತಿ ಗೌರಮ್ಮ ಸಿದ್ದಪ್ಪನವರು
ಕೆ.ಎಸ್. ಬಸವರಾಜಪ್ಪ ಮತ್ತು ಸಹೋದರರು,
ಅಳಿಯಂದಿರು, ಮೊಮ್ಮಕ್ಕಳು ಹಾಗೂ
ಬಂಧು-ಮಿತ್ರರು ಮತ್ತು ಆನಗೋಡು ಗ್ರಾಮಸ್ಥರು.

**ಮಹಿಳಾ ಪಿ.ಜಿ.**
ವಿದ್ಯಾರ್ಥಿನಿಯರಿಗೆ ಹಾಗೂ ಉದ್ಯೋಗಸ್ಥ ಮಹಿಳೆಯರಿಗೆ ಊಟ ಮತ್ತು ವಸತಿ ವ್ಯವಸ್ಥೆ ಇರುವ ಮಹಿಳಾ ಪಿ.ಜಿ. ಸೌಲಭ್ಯವಿದೆ. ಸಂಪರ್ಕಿಸಿ: "ಮೀನಾಕ್ಷಿ ಭವನ" ಆಂಜನೇಯ ಬಡಾವಣೆ, ಆಂಜನೇಯ ದೇವಸ್ಥಾನದ ಹತ್ತಿರ, ದಾವಣಗೆರೆ.
90601 72745

**ಸೈಟ್ ಮಾರಾಟಕ್ಕೆ (37 ಲಕ್ಷಕ್ಕೆ)**
ಜೆ.ಹೆಚ್ ಪಟೇಲ್ ಬಡಾವಣೆ ಪಕ್ಕ 30x44.5 ಉತ್ತರ ಮನೆ ಕಟ್ಟಲು ತುಂಬಾ ಚನ್ನಾಗಿದೆ.
ಕಿರಣ್ ಬೂಸ್ನೂರ್ (ಏಜೆಂಟ್)
97315 63409, 98440 63409

**ಮನೆ / ಖಾಲಿ ಜಾಗ ಮಾರಾಟಕ್ಕಿದೆ**
ದಾವಣಗೆರೆ ಕೆಟಿಜೆ ನಗರ 7ನೇ ಕ್ರಾಸ್ ನಲ್ಲಿ ಮನೆ ಸಂಖ್ಯೆ 1311/2ರಲ್ಲಿ 15x40 ಅಳತೆಯ ಮನೆ ಮತ್ತು 1312/1 ರಲ್ಲಿ 15x40 ಅಳತೆಯ ಖಾಲಿ ಜಾಗ ಮಾರಾಟಕ್ಕಿದೆ. ಸಂಪರ್ಕಿಸಿ :
98452-59121

**ಮನೆ ಮಾರಾಟಕ್ಕಿದೆ**
ದಾವಣಗೆರೆ SPS ನಗರದ 2ನೇ ಹಂತದಲ್ಲಿ ಡೋರ್ ನಂ. ವುಳ್ಳ 20x30 ರಲ್ಲಿ ಕಟ್ಟಿರುವ ಉತ್ತರ ದಿಕ್ಕಿನ ಒಂದು ಅಂತಸ್ತಿನ ಮನೆ ಮಾರಾಟಕ್ಕಿದೆ. ವಿಚಾರಿಸಿ :
ಮೊ. 95917 12131

**ಜಮೀನು ಮಾರಾಟಕ್ಕಿದೆ**
ಪುಣಭಘಟ್ಟ ಗ್ರಾಮ, ಅರಸಿಕೆರೆ ಹೋಬಳಿ, ಹರಪನಹಳ್ಳಿ ತಾಲ್ಲೂಕು.
ಸರ್ವೆ ನಂ.335/A- 4.08 ಸೆಂಟ್ಸ್,
ಸರ್ವೆ ನಂ.335/B- 2.43 ಸೆಂಟ್ಸ್.
ಒಟ್ಟು 6.51 ಸೆಂಟ್ಸ್, 2 ಪಂಪ್ ಸೆಟ್ ಹೊಂದಿರುವ ಜಮೀನು ಮಾರಾಟಕ್ಕಿದೆ.
99726 02950

**ಮನೆಗಳು ಮಾರಾಟಕ್ಕಿವೆ**
40x60 North, 3 ಬೆಡ್ ರೂಂ ಮನೆ ಕುವೆಂಪು ಬಡಾವಣೆಯಲ್ಲಿ, 40x60 West 2 ಬೆಡ್‌ರೂಂ ಮನೆ ಹೊಸ ಮನೆ ಸಿದ್ದವೀರಪ್ಪ ಬಡಾವಣೆಯಲ್ಲಿ
ಐನಳ್ಳಿ ಚನ್ನಬಸಪ್ಪ, ಏಜೆಂಟ್
93410 14130

**ಬೇಕಾಗಿದ್ದಾರೆ**
ಹೊಳಲ್ಕೆರೆ ತಾಲ್ಲೂಕಿನಲ್ಲಿ ಅಡಿಕೆ ತೋಟದಲ್ಲಿ ಕೆಲಸ ಮಾಡಲು ಒಂದು ಕುಟುಂಬದವರು ಬೇಕಾಗಿದ್ದಾರೆ.
94484 39639

**ಬೇಕಾಗಿದ್ದಾರೆ**
ಭರಮಸಾಗರ, ದಾವಣಗೆರೆ, ಹರಿಹರ, ರಾಣೇಬೆನ್ನೂರಿನ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ESI, PF ಸೌಲಭ್ಯವಿದೆ.
ಸಫಾಜ್ ಸೆಕ್ಯೂರಿಟಿ
ವಿನೋಬನಗರ, 3ನೇ ಮೇನ್, ಪಿ.ಬಿ. ರಸ್ತೆ, ದಾವಣಗೆರೆ.
91130 53483

**ಕರ್ನಾಟಕ ಗೃಹ ಮಂಡಳಿಯಲ್ಲಿ ಮನೆಗಳು, ಸೈಟ್‌ಗಳು ಮಾರಾಟಕ್ಕಿವೆ**
30x40 North ಮನೆ, 30x50 East, ಮನೆ, 40x60 East ಸೈಟ್, 40x60 South, 40x60 West, 30x50 East
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಉತ್ತಮ ತಳಿಯ ಅಡಿಕೆ ಸಸಿ ಮಾರಾಟಕ್ಕೆ ಲಭ್ಯವಿದೆ**
ದಾವಣಗೆರೆಯಲ್ಲಿ (ದೊಡ್ಡ ಬಾತಿ)
ಫೋ. : 88920 08800

**ಮನೆ ಬಾಡಿಗೆಗೆ ಇದೆ**
ಪಿ.ಜೆ. ಬಡಾವಣೆ, 8ನೇ ಮೇನ್, 8ನೇ ಕ್ರಾಸ್, ಮಲ್ಲಿಗೆ ಹೆಲ್ತ್ ಸೆಂಟರ್ ಬಿಲ್ಡಿಂಗ್, ಆಫೀಸ್ ಅಥವಾ ಕ್ಲಿನಿಕ್‌ಗೆ ಬಾಡಿಗೆಗೆ ಇದೆ.
77955 07876

**ಮನೆ ಲೀಸ್‌ಗೆ ಇದೆ**
7.50 ಲಕ್ಷಕ್ಕೆ ಹೊಸ ನಿಟುವಳ್ಳಿ ಬಡಾವಣೆಯಲ್ಲಿ ಎರಡು ಬೆಡ್ ರೂಂ ಇರುವ ಉತ್ತರ ದಿಕ್ಕಿನಲ್ಲಿರುನ 1ನೇ ಮಹಡಿಯಲ್ಲಿರುವ ಮನೆ ಇದೆ. ಬೋರ್/ಮುನ್ಸಿಪಲ್ ನೀರು, ಕಾರ್ ಪಾರ್ಕಿಂಗ್ ಇದೆ.
ಫೋ. : 97435 59986

**ಬೇಕಾಗಿದ್ದಾರೆ**
ಮೆಡ್‌ಕ್ಯೂರ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸಂಪರ್ಕಿಸಿ: ಶೋಭಾ ಟಾಕೀಸ್ ಹತ್ತಿರ, ಹರಿಹರ
ಮೊ: 78999 91860

**ಮನೆ ಬಾಡಿಗೆಗೆ ಇದೆ**
ಪಿ.ಜೆ ಬಡಾವಣೆ 4ನೇ ಮೇನ್, 9ನೇ ಕ್ರಾಸ್‌ನಲ್ಲಿ ಡೋರ್ ನಂ 360/3 ಗುರುದತ್ತ ನಿವಾಸ, 2 ಬೆಡ್‌ರೂಂ, ಮುನ್ಸಿಪಲ್ ನೀರಿನ ಸೌಕರ್ಯವಿರುವ ಮನೆ ಬಾಡಿಗೆಗಿದೆ. ಸಂಪರ್ಕಿಸಿ
94486 66668

**ನಿವೇಶನ ಬಾಡಿಗೆಗೆ ಇದೆ**
ಹರಿಹರ ನಗರದ ದೂಡ ಅಪ್ರೂಲ್ ಮತ್ತು ನಗರಸಭೆ ಡೋರ್ ನಂ ಹೊಂದಿರುವ ಒಂದು ಮತ್ತು ಎರಡನೇ ರೈಲ್ವೆ ಗೇಟ್ ಮಧ್ಯದಲ್ಲಿ 17 ಗುಂಟೆ ನಿವೇಶನ ಶೋ ರೂಂ ಮತ್ತು ಹೋಟೆಲ್ ಮಾಡುವುದಕ್ಕೆ ಯೋಗ್ಯವಾದ ನಿವೇಶನ ಬಾಡಿಗೆಗಿದೆ. ಆಸಕ್ತರು ಸಂಪರ್ಕಿಸಿ:
ಫೋ. : 88678 67610

**ಕುರಿಗಳು ಮಾರಾಟಕ್ಕಿವೆ**
ಶ್ರೀ -ಮಾರುತಿ ಕುರಿ ಸಾಕಾಣಿಕೆ ಕೇಂದ್ರ
ನಮ್ಮಲ್ಲಿ ಉತ್ತಮವಾಗಿ ಸಾಕಿದ ಆರೋಗ್ಯಕರ ನಾಟಿ ಟಗರುಗಳು ಸಿಗುತ್ತವೆ. ದಾವಣಗೆರೆಯಿಂದ ಕೇವಲ 4 ಕಿ.ಮೀ ಸಂಪರ್ಕಿಸಿ
70196 02944
94807 46013

**ಗ್ರಾಹಕರಿಗೆ ಸುವರ್ಣಾವಕಾಶ**
ಬ್ಯಾಂಕ್ ಆಫ್ ಬರೋಡ ಬ್ಯಾಂಕ್ ವತಿಯಿಂದ ಮನೆ ಕಟ್ಟುವವರಿಗೆ, ಕಟ್ಟಿದ ಮನೆಯ ಮೇಲೆ ಕೈಗಾರಿಕೆ ಹಾಗೂ ಸಣ್ಣ ಕೈಗಾರಿಕೆ ಗ್ರಾಹಕರಿಗೆ ಆಕರ್ಷಕ ಬಡ್ಡಿ ದರದಲ್ಲಿ ಲೋನ್ ಕೊಡಲಾಗುವುದು.
91136 21123

**ಬೇಕಾಗಿದ್ದಾರೆ**
ಆಫೀಸ್ ಕೆಲಸಕ್ಕೆ ಕಂಪ್ಯೂಟರ್ ಆಪರೇಟಿಂಗ್ ಕಲಿತಿರುವ ಹುಡುಗರು ಬೇಕಾಗಿದ್ದಾರೆ.
63646 56169

**ಅಡುಗೆ ಭಟ್ಟರು ಬೇಕಾಗಿದ್ದಾರೆ**
ಬ್ಯಾಡಗಿಯಲ್ಲಿರುವ ಹೋಟೆಲ್‌ಗೆ ಅಡುಗೆ ಭಟ್ಟರು ಮತ್ತು ಸಹಾಯಕರು ಪುರುಷರು ಅಥವಾ ಮಹಿಳೆಯರು ಬೇಕಾಗಿದ್ದಾರೆ. (ವಸತಿ ಮತ್ತು ಊಟದ ವ್ಯವಸ್ಥೆ ಇರುತ್ತದೆ)
93437 45992

**ಜಮೀನು ಮಾರಾಟಕ್ಕಿದೆ**
8.5 ಗುಂಟೆ ಜಮೀನು (ಮನೆ) ಮಾರಾಟಕ್ಕಿದೆ. ಹರಿಹರ ಪಿ.ಬಿ. ರಸ್ತೆ ಹತ್ತಿರ
92061 43361

**ಎಮ್ಮೆ ಹಾಲು ದೊರೆಯುತ್ತದೆ**
ಸಂಪರ್ಕಿಸಿ :
8310538369

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ. SSLC, PUC Degree, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನದ ಹಿಂಭಾಗ, ಸೋಮು ಮೆಡಿಕಲ್ಸ್ ಮೇಲೆ, ದಾವಣಗೆರೆ.
87490 24789, 94837 64859

**ಸೈಟ್ ಮಾರಾಟಕ್ಕಿದೆ**
ಬಸವೇಶ್ವರ ಬಡಾವಣೆ 40x60 ದಕ್ಷಿಣ, ನಿಜಲಿಂಗಪ್ಪ ಬಡಾವಣೆ 40x60 ದಕ್ಷಿಣ, ಹೊಸ ಬನಶಂಕರಿ ಬಡಾವಣೆ 30x50 ಪಶ್ಚಿಮ
86181 82332

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸಂಬಳ 8500/- ಊಟ, ರೂಂ ಉಚಿತ.
97400 98047, 97400 98064

**House for Rent**
2 Bed room, East facing vastu House, First floor with good water facility.
70196 73972
98450 55643

**ಮನೆ ಕಟ್ಟುವವರಿಗೆ ಸಿಹಿ ಸುದ್ದಿ**
ಸಂಕ್ರಾಂತಿವರೆಗೆ ಬಿಲ್ಡಿಂಗ್ ಪ್ಲಾನ್ಸ್ ಉಚಿತವಾಗಿ ಕೊಡಲಾಗುವುದು. (T&C)
ಕಲ್ಪತರು ಕನ್‌ಸ್ಟ್ರಕ್ಷನ್, ದಾವಣಗೆರೆ.
ಇಂಜಿನಿಯರ್ ಮತ್ತು ಕಾಂಟ್ರ್ಯಾಕ್ಟರ್ಸ್
ಮೊ. : 98455 83340

**TEACHERS WANTED**
We look for trained and untrained teachers with fluency in English for the following subject. English, Maths, Science, Social, Hindi, Kannada, Computer Science
Sri Gurukula CBSE Residential School
Lokikere Road, Thuruchagatta Village, Davangere.
7338604512, 73386 04513

**ಮಾರಾಟಕ್ಕಿವೆ**
ಎಲ್ಲಾ ತರಹದ ಅಂಗಡಿಗಳಿಗೂ ಸರಿ ಹೊಂದುವಂತಹ ಪ್ಲೇವುಡ್ ರ್‍ಯಾಕ್ ಗ್ಲಾಸ್ ಸೇಲ್ಫ್ ಇರುವಂತಹ ರ್‍ಯಾಕ್‌ಗಳು ಮಾರಾಟಕ್ಕಿವೆ. ಸಂಪರ್ಕಿಸಿ
97434 47076

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
Near Coffee day, Nutana College Road, Vidyanagara, 2nd Main, Davangere
77603 16576
90080 55813

**ಡಾಕ್ಟರ್‌ಗಳು ಬೇಕಾಗಿದ್ದಾರೆ**
ಫಿಜಿಷಿಯನ್, ಪಿಡಿಯಾಟ್ರಿಕ್, ಗೈನಿಕ್ ಮತ್ತು ಆರ್ಥೋಪಿಡಿಕ್ ಡಾಕ್ಟರ್ ಬೇಕಾಗಿದ್ದಾರೆ. ಸಂಪರ್ಕಿಸಿ
70192 49897

**REQUIRED TELECALLERS**
Contact : 96066 92888
96066 91888
82963 76716
Location : Davangere

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್, ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 81339 33804

**JOBS**
Sales Manager/Executives Any Degree (English, Computer Knowledge) Office Job/Marketing/ Field Work, Male/Female Freshers/Experienced
98444 92888

**ಬೇಕಾಗಿದ್ದಾರೆ**
ಆಫೀಸ್‌ನಲ್ಲಿ ಕಂಪ್ಯೂಟರ್ ಕೆಲಸಕ್ಕೆ Tally ಆಗಿರುವವರು ಬೇಕಾಗಿದ್ದಾರೆ.
ಶ್ರೀ ಆಂಜನೇಯ ಆಗ್ರೋ ಡಿಸ್ಟ್ರಿಬ್ಯೂಟರ್ಸ್, ನಂ.95/1ಎ ಕೆ.ಆರ್.ರೋಡ್, ವಿ.ಆರ್.ಎಲ್. ಆಫೀಸ್ ಹತ್ತಿರ,ದಾವಣಗೆರೆ-1.


# ದೇಹ ಬಲ, ಮನೋಬಲ, ಆತ್ಮ ಬಲದಿಂದ ಸಾಧನೆ ಸಾಧ್ಯ

## ವಿವೇಕಾನಂದರ ಜನ್ಮದಿನಾಚರಣೆಯಲ್ಲಿ ಹರಪನಹಳ್ಳಿಯ ಸಿವಿಲ್ ನ್ಯಾಯಾಧೀಶರಾದ ಎಂ.ಭಾರತಿ

ಹರಪನಹಳ್ಳಿ, ಜ.12- ದೇಹ ಬಲ, ಮನೋಬಲ, ಆತ್ಮ ಬಲದಿಂದ ಗುರಿ ಸಾಧಿಸಲು ಸಾಧ್ಯವಾಗುತ್ತದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ.ಭಾರತಿ ಅವರು ಪ್ರತಿಪಾದಿಸಿದರು.

ಪಟ್ಟಣದ ಬಂಗಿ ಬಸಪ್ಪ ವಿಜ್ಞಾನ ಪದವಿ ಪೂರ್ವ ಕಾಲೇಜಿನಲ್ಲಿ ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ, ರಾಜ್ಯ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ಕಾನೂನು ಪ್ರಾಧಿಕಾರ, ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ತಾಲ್ಲೂಕು ವಿವಿಧ ಇಲಾಖೆಗಳು ಇವರ ಸಹಯೋಗದಲ್ಲಿ ಸ್ವಾಮಿ ವಿವೇಕಾನಂದರ 159 ನೇ ಜನ್ಮದಿನಾಚರಣೆ ಹಾಗೂ ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ, ರಾಷ್ಟ್ರೀಯ ಯುವ ಸಪ್ತಾಹ ಕುರಿತು ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸ್ವಾಮಿ ವಿವೇಕಾನಂದರು 39 ವರ್ಷ ಬದುಕಿ ಅನೇಕ ಸಾಧನೆಗಳನ್ನು ಮಾಡಿ ದ್ದಾರೆ. ಅವರ ಅನುಯಾಯಿಗಳಾಗಿ ಕಾರ್ಯ



ನಿರ್ವಹಿಸಿದಾಗ ಮಾತ್ರ ಸಾಧನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಯಾರಲ್ಲಿ ಸಹನೆ, ಶ್ರದ್ಧೆ, ಇರುತ್ತದೋ ಅವರು ಮಾತ್ರ ಸಾಧನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಅವರು ಹೇಳಿದರು.

ತಂದೆ, ತಾಯಿ, ಶಿಕ್ಷಕರಿಗೆ ಗೌರವ ಯುತವಾಗಿ ನಡೆದುಕೊಳ್ಳಬೇಕು, ಗುರು ಶಿಷ್ಯರ ಸಂಬಂಧ ಅನ್ಯೋನ್ಯತೆಯಿಂದ ಕೂಡಿರಬೇಕು, ದೇಶದ ಶಕ್ತಿ ಭಗವದ್ಗೀತೆಯ ಮೇಲಿದೆ. ಸ್ವಾಮಿ ವಿವೇಕಾನಂದರ ಅನುಯಾಯಿಗಳಾಗಿ ಕಾರ್ಯನಿರ್ವಹಿಸಿದಾಗ ಮಾತ್ರ ಸಮಾಜದಲ್ಲಿ ಸೃಜನಶೀಲ ವ್ಯಕ್ತಿಯಾಗಿ ಹೊರಹೊಮ್ಮುವುದಕ್ಕೆ ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಅಪರ ಸರ್ಕಾರಿ ವಕೀಲ ವಿ.ಜಿ. ಪ್ರಕಾಶ್ ಗೌಡ, ಮಾತನಾಡಿ, ಯುವಕರು ಸ್ವಾಮಿ ವಿವೇಕಾನಂದರ ವಾಣಿಯನ್ನು ಅಳವಡಿಸಿಕೊಳ್ಳಬೇಕು. ವ್ಯಕ್ತಿತ್ವ ವಿಕಸನ ಮಾಡಿಕೊಳ್ಳಬೇಕು, ಕಲಿಕೆಗೆ ಸುಲಭ ಮಾರ್ಗಗಳಿದ್ದು, ಏಕಾಗ್ರತೆಯಿಂದ ಕಲಿತರೆ ಸಾಧನೆ ಸಾಧ್ಯ ಎಂದು ಪ್ರತಿಪಾದಿಸಿದರು.

ಎಂ. ಮೃತ್ಯುಂಜಯ ಮಾತನಾಡಿ, ದೇಶದ ಬೆಳವಣಿಗೆಯಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತಿರುವ ಯುವಕರು ದುಶ್ಚಟ ಗಳಿಗೆ ಬಲಿಯಾಗಿ ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ. ಸುಮಾರು 30 ಲಕ್ಷ ಯುವಕರು ಏಡ್ಸ ಖಾಯಿಲೆಯಿಂದ ಬಳಲುತ್ತಿರವುದು ಬಹುದೊಡ್ಡ ದುರಂತ ಎಂದರು.

ಸಹಾಯಕ ಸರ್ಕಾರಿ ಅಭಿಯೋಜಕರಾದ ಮೀನಾಕ್ಷಿ ಎನ್. ವಕೀಲರ ಸಂಘದ ಉಪಾಧ್ಯಕ್ಷ ವಾಸುದೇವ, ಕಾರ್ಯದರ್ಶಿ, ಎಸ್.ಜಿ.ತಿಪ್ಪೇಸ್ವಾಮಿ, ಜಂಟಿ ಕಾರ್ಯದರ್ಶಿ ಎಂ. ನಾಗೇಂದ್ರಪ್ಪ, ಎಸ್.ಸಿ.ಎಸ್.ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ರಾದ ಆರ್. ನಾಗೇಂದ್ರರಾವ್, ಬಂಗಿ ಬಸಪ್ಪ ವಿಜ್ಞಾನ ಪದವಿ ಪೂರ್ವ ಕಾಲೇಜ್ ಪ್ರಾಚಾರ್ಯ ಎ. ವಿ.ಅರುಣ್ ಕುಮಾರ್, ಉಪನ್ಯಾಸಕರುಗಳಾದ, ಮಡಿವಾಳಸ್ವಾಮಿ, ಕರಿಯಪ್ಪ, ಎ.ವಿ. ವೀರನಗೌಡ, ರೇವಣಸಿದ್ದಪ್ಪ, ಬಸವರಾಜ, ಕೊಟ್ರೇಶ್ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ನಿವೇಶನ ಸ್ವಚ್ಛತಾ ದಂಡ ಶುರು

(1ನೇ ಪುಟದಿಂದ) ಮಹತ್ವದ ಕೆಲಸಕ್ಕೆ ಮುಂದಾಗಿತ್ತು.

ನಗರದ ಸಿದ್ಧವೀರಪ್ಪ ಬಡಾವಣೆಯಿಂದ ಇಂದು ಸ್ವಚ್ಛತಾ ಕಾರ್ಯಕ್ರಮ ಆರಂಭವಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಮಹಾನಗರ ಪಾಲಿಕೆಯಿಂದಲೇ ಖಾಲಿ ನಿವೇಶನ ಸ್ವಚ್ಛಗೊಳಿಸಿ ಪ್ರತಿ ಚದರ ಅಡಿಗೆ ಹತ್ತು ರೂ.ಗಳಂತೆ ದಂಡ ನಿಗದಿಪಡಿಸಿ, ಮಾಲೀಕರು ಕಂದಾಯ ಕಟ್ಟುವಾಗ ಈ ಹಣವನ್ನೂ ಪಾವತಿ ಮಾಡಿಸಿಕೊಳ್ಳಲಾಗುತ್ತದೆ ಎಂದು ಹೇಳಿದರು.

ಖಾಲಿ ನಿವೇಶನಗಳಲ್ಲಿ ಗಿಡ-ಗಂಟೆಗಳು ಬೆಳೆದಿದ್ದಲ್ಲಿ ಅಕ್ಕ-ಪಕ್ಕದಲ್ಲಿ ವಾಸಿಸುವ ಜನರಿಗೆ ತೊಂದರೆ ಉಂಟಾಗುತ್ತದೆ. ಹಾವು, ಹಂದಿಗಳು ಸೇರಿಕೊಳ್ಳುತ್ತವೆ. ಇದರಿಂದ ಮಕ್ಕಳು, ಹಿರಿಯರಿಗೆ ತೊಂದರೆ ಆಗುತ್ತದೆ. ಇದನ್ನೆಲ್ಲ ಗಮನಿಸಿ ಈಗಾಗಲೇ ಪಾಲಿಕೆಯು ಮೂರು ಬಾರಿ ಸಾರ್ವಜನಿಕ ಪ್ರಕಟಣೆ ನೀಡಿದೆ. ಆದರೂ ಜನರು ಖಾಲಿ ನಿವೇಶನಗಳಲ್ಲಿ ಸ್ವಚ್ಛತೆ ಮಾಡಿಕೊಂಡಿಲ್ಲ. ಹೀಗಾಗಿ, ಸ್ವತಃ ಮಹಾನಗರ ಪಾಲಿಕೆ ಸಿಬ್ಬಂದಿ ಈಗ ಈ ಕೆಲಸ ಮಾಡಲಿದ್ದಾರೆ ಎಂದು ಆಯುಕ್ತ ವಿಶ್ವನಾಥ ಪಿ. ಮುದಜ್ಜಿ ಹೇಳಿದ್ದಾರೆ.

ಇಂದು ಸಿದ್ದವೀರಪ್ಪ ಬಡಾವಣೆಯಿಂದ ಈ ಕಾರ್ಯಕ್ಕೆ ಚಾಲನೆ ನೀಡಲಾಗಿದ್ದು, ಪಾಲಿಕೆಯ ಎಲ್ಲಾ ವಾರ್ಡ್‌ಗಳಲ್ಲಿರುವ ಖಾಲಿ ನಿವೇಶನಗಳ ಸ್ವಚ್ಛತಾ ಕೆಲಸ ನಡೆಯಲಿದೆ. ಇನ್ನಾದರೂ ನಿವೇಶನಾದಾರರು ತಮ್ಮಮ್ಮ ಖಾಲಿ ನಿವೇಶನಗಳಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು ಎಂದು ಮಹಾಪೌರರು ಹಾಗೂ ಆಯುಕ್ತರು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯೆ ಗೌರಮ್ಮ ಗಿರೀಶ್, ಪಾಲಿಕೆಯ ಆರೋಗ್ಯ ವಿಭಾಗದ ಸಹಾಯಕ ನಿರ್ದೇಶಕ ಡಾ. ಸಂತೋಷ್, ಎಆರ್‌ಓ ವಿನಾಯಕ್ ಮತ್ತಿತರರಿದ್ದರು.

## ವಿವೇಕರು ಯುವಕರಿಗೆ ಸ್ಫೂರ್ತಿ

(1ನೇ ಪುಟದಿಂದ) ಮಹತ್ವ ಎಂದು ಪ್ರತಿಪಾದಿಸಿದರು ಎಂದರು.

ಸಮಾರಂಭದ ಸಾನ್ನಿಧ್ಯ ವಹಿಸಿದ್ದ ದಾವಣಗೆರೆ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಶ್ರೀ ತ್ಯಾಗೀಶ್ವರಾನಂದ ಮಾತನಾಡಿ, ವಿವೇಕಾನಂದರು ಬದುಕಿದ್ದು 39 ವರ್ಷ. 29- 30 ವರ್ಷಕ್ಕೆ ಅವರು ಪ್ರಪಂಚ ಗುರುತಿಸುವಂತೆ ಜ್ಞಾನ ಸಂಪಾದಿಸಿದರು. ಆ ನಂತರ 10 ವರ್ಷದಲ್ಲಿ 1500 ವರ್ಷಕ್ಕೆ ಆಗುವಷ್ಟು ಕೊಟ್ಟು ಹೋಗಿದ್ದಾರೆ. ಆದರೆ ಅವರು ಏನು ಕೊಟ್ಟಿದ್ದಾರೆ ಎಂದು ಭಾರತೀಯರಾದ ನಾವು ಇನ್ನೂ ತೆರೆದು ನೋಡಿಲ್ಲ ಎಂದು ವಿದೇಶದ ಚಿಂತಕರೊಬ್ಬರು ಹೇಳುವ ಮಾತನ್ನು ಉಲ್ಲೇಖಿಸಿದರು.

ದಾವಣಗೆರೆ ರಾಮಕೃಷ್ಣ ಮಠ ಏರ್ಪಡಿಸಿದ್ದ ವಿವೇಕ ಚಿತ್ರಕಲಾ ಶಿಬಿರದಲ್ಲಿ ದಾವಣಗೆರೆ ಚಿತ್ರಕಲಾ ಪರಿಷತ್‌ನ ಸಂತೋಷ ಕುಲಕರ್ಣಿ, ಹರೀಶ್ ಹೆಡ್ನವರ್, ಪ್ರವೀಣ್, ರಾಜೇಶ್, ಯೋಗೀಶ್, ಅಶೋಕ್, ಲೋಕೇಶ್ ಎಸ್‌ಡಿ, ದಾಕ್ಷಾಯಣಿ, ವೀರೇಶ್ ಎಸ್.ಎನ್, ಮಧುಸೂದನ್, ಅಚ್ಚುತಾನಂದ, ರವಿ ಹುದ್ದಾರ್, ಅಶ್ವಿನಿ, ಕಲಾಕೃತಿ ಗ್ರೂಪ್‌ನ ಪ್ರಶಾಂತ್ ಎನ್. ಭಾಗವಹಿಸಿದ್ದರು. ವಿಜಯ ಕರ್ನಾಟ ಸ್ಥಾನಿಕ ಸಂಪಾದಕ ಸದಾನಂದ ಹೆಗಡೆ, ದಾವಣಗೆರೆ ಚಿತ್ರಕಲಾಪರಿಷತ್ ಕಾರ್ಯದರ್ಶಿ ಡಿ. ಶೇಷಾಚಲ, ಈಶ್ವರ ಸಿಂಗ್ ಕವಿತಾಳ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಬ್ರಹ್ಮಚಾರಿ ಚೈತನ್ಯ ಅವರು ಕಾರ್ಯಕ್ರಮ ನಿರೂಪಿಸಿದರು.

## ಶಾಲಾ ಬಂದ್ ಕುರಿತು ತೀರ್ಮಾನ

(1ನೇ ಪುಟದಿಂದ) ಕಾರಣಕ್ಕೂ ಶಾಲೆ ಬಂದ್ ಮಾಡುವುದಿಲ್ಲ. ಸಾಧ್ಯವಿರುವ ಕಡೆಗೂ ಶಾಲೆ ನಡೆಸಲು ನಿರ್ಧರಿಸಿದ್ದೇವೆ. ಆದರೆ ಬೆಂಗಳೂರು ನಗರದಲ್ಲಿ ಮಾತ್ರ ಜನವರಿ 31 ರವರೆಗೂ ಶಾಲೆಗಳನ್ನು ತೆರೆಯುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ರಾಜ್ಯದ 12 ಜಿಲ್ಲೆಗಳಲ್ಲಿ ಕೋವಿಡ್ ಪಾಸಿಟಿವಿಟಿ ದರ ಶೂನ್ಯವಿದೆ. ಸೋಂಕು ಹೆಚ್ಚಿರುವ ಕಡೆಗಳಲ್ಲಿ ಶಾಲೆ ನಡೆಸಬೇಕೆ ಬೇಡವೇ ಎಂಬುದನ್ನು ಅಲ್ಲಿನ ಜಿಲ್ಲಾಧಿಕಾರಿಗಳೇ ತೀರ್ಮಾನ ಕೈಗೊಳ್ಳುತ್ತಾರೆ.

ಬೆಂಗಳೂರಿನಲ್ಲಿ ಸೋಂಕು ಮಿತಿಮೀರಿರುವುದರಿಂದ ಇಂತಹ ಕ್ರಮ ಕೈಗೊಂಡಿದ್ದೇವೆ. ಇದುವರೆಗೂ ಸರ್ಕಾರಿ ಶಾಲೆಗಳಲ್ಲಿ ಒಂದು ಸಾವಿರ ವಿದ್ಯಾರ್ಥಿಗಳಿಗೆ ಮಾತ್ರ ಸೋಂಕು ತಗುಲಿದೆ. ಆದರೆ ಯಾವುದೇ ರೀತಿ ಅಪಾಯವಿಲ್ಲ.

ಸದ್ಯ ಶಾಲೆ ಮುಚ್ಚುವ ಗಂಭೀರ ಸ್ಥಿತಿ ಇಲ್ಲ. ಆದರೂ ತಜ್ಞರ ಅಭಿಪ್ರಾಯ ಪಡೆದು, ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

## ಪಾದಯಾತ್ರೆ : ಚಾಟಿ ಬೀಸಿದ ಹೈಕೋರ್ಟ್

(1ನೇ ಪುಟದಿಂದ) ತೀವ್ರ ತರಾಟೆಗೆ ತೆಗೆದುಕೊಂಡಿತು.

ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮತ್ತು ಕೆಪಿಸಿಸಿ ಇಬ್ಬರು ನ್ಯಾಯಾ ಲಯಕ್ಕೆ ತಕ್ಕ ಉತ್ತರ ನೀಡಬೇಕೆಂದು ಆದೇಶಿಸಿರುವ ನ್ಯಾಯಪೀಠ, ನೀವು ಪಾದಯಾತ್ರೆ ತಡೆಯಲಾಗದಿದ್ದರೇ, ನಾವೇ ತೀರ್ಮಾನ ಕೈಗೊಳ್ಳಬೇಕೆ ಎಂದು ಎಚ್ಚರಿಕೆಯನ್ನು ನೀಡಿರುವುದಲ್ಲದೆ, 24 ಗಂಟೆಯೊಳಗಾಗಿ ನಮಗೆ ತಿಳಿಸಿ ಎಂದು ಆದೇಶಿಸಿದೆ.

ಇದಕ್ಕೂ ಮುನ್ನ ಅರ್ಜಿದಾರರ ಪರ ವಕೀಲರು ರಾಜ್ಯದಲ್ಲಿ ಕೋವಿಡ್ ನಿಯಂತ್ರಣಕ್ಕಾಗಿ ಸರ್ಕಾರ ವಿಧಿಸಿರುವ ನಿರ್ಬಂಧಗಳ ನಡುವೆಯೂ ಮೇಕೆದಾಟು ಯೋಜನೆ ಜಾರಿ ಆಗ್ರಹಿಸಿ, ಕೆಪಿಸಿಸಿ ಇದೇ 9 ರಿಂದ ಪಾದಯಾತ್ರೆ ಆರಂಭಿಸಿದೆ.

ಈ ಪಾದಯಾತ್ರೆಯಲ್ಲಿ ಕಾರ್ಯ ಕರ್ತರು, ಮುಖಂಡರು, ಸಾಂಸ್ಕೃತಿಕ ತಂಡಗಳು ಸೇರಿದಂತೆ ಸಾವಿರಾರು ಮಂದಿ ಪಾಲ್ಗೊಂಡಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು. ಇದರಿಂದ ಸೋಂಕು ವೇಗವಾಗಿ ಹರಡುವ ಸಾದ್ಯತೆ ಇದೆ. ರಾಷ್ಟ್ರೀಯ ಪಕ್ಷವೊಂದು ಸರ್ಕಾರದ ಎಲ್ಲ ನಿಯಮ ಗಳನ್ನು ಉಲ್ಲಂಘಿಸಿ, ಪಾದಯಾತ್ರೆ ನಡೆಸುತ್ತಿದೆ. ತಪ್ಪಿತಸ್ಥರ ವಿರುದ್ಧ ಈತನಕ, ಇದುವರೆಗೂ ಯಾವುದೇ ಕ್ರಮ ಜರುಗಿಸಿಲ್ಲ ಎಂದು ಆರೋಪಿಸಿದರು.

ಇದಕ್ಕೆ ಉತ್ತರಿಸಿದ ಹೆಚ್ಚುವರಿ ಅಡ್ವೋಕೇಟ್ ಜನರಲ್ ಅವರು, ಪಾದಯಾತ್ರೆ ಆಯೋಜಕರಿಗೆ ಈಗಾಗಲೇ ಜಿಲ್ಲಾಡಳಿತ ನೋಟಿಸ್ ನೀಡಿದೆ, ಕೆಲವರ ವಿರುದ್ಧ ಎಫ್‌ಐಆರ್ ಕೂಡ ದಾಖಲಿಸಲಾಗಿದೆ ಎಂದರು.

ಹೆಚ್ಚುವರಿ ಅಡ್ವೋಕೇಟ್ ಜನರಲ್ ಅವರ ಉತ್ತರದ ನಡುವೆಯೇ ಕೆರಳಿ ಕೆಂಡವಾದ ಮುಖ್ಯ ನ್ಯಾಯಮೂರ್ತಿಗಳು ಎಫ್‌ಐಆರ್ ದಾಖಲು ಮಾಡಲಾಗಿದೆ ಎಂದ ಮೇಲೆ ಮುಂದೆ ಏನು ಕ್ರಮ ಜರುಗಿಸಿದ್ದೀರಿ? ಅಥವಾ ಮುಂದಿನ ಕ್ರಮ ಜರುಗಿಸಲು ಯಾರ ಅಣತಿಗೆ ಕಾಯುತ್ತಿದ್ದೀರಿ? ಎಂದು ತೀವ್ರ ತರಾಟೆಗೆ ತೆಗೆದುಕೊಂಡರು.

ಕರ್ನಾಟಕ ಈಗಾಗಲೇ ಕೋವಿಡ್‌ನಿಂದ ತತ್ತರಿಸುತ್ತಿದೆ. ಇಂತಹ ಸಂದರ್ಭದಲ್ಲಿ ರಾಜಕೀಯ ಪಕ್ಷ ಪಾದಯಾತ್ರೆ ನಡೆಸುತ್ತಿದೆ. ಸರ್ಕಾರದ ಮಾರ್ಗಸೂಚಿ ಪಾಲಿಸಲು ಕೆಪಿಸಿಸಿ ಏನು ಕ್ರಮ ಕೈಗೊಂಡಿದೆ. ಇಂತಹ ಕ್ಲಿಷ್ಟಕರ ಸಮಯದಲ್ಲೂ ಪಾದಯಾತ್ರೆಗೆ ಸರ್ಕಾರ ಹೇಗೆ ಅನುಮತಿ? ನೀಡಿತು ಎಂದು ಪೀಠ ಪ್ರಶ್ನೆಗಳ ಸರಮಾಲೆಯನ್ನೇ ಮುಂದಿಟ್ಟಿತ್ತು.

ನಿಮಗೆ ನ್ಯಾಯಾಂಗದ ಆದೇಶಗಳು ಬಂದ ಮೇಲೆಯೇ ಕ್ರಮ ಕೈಗೊಳ್ಳಬೇಕೆಂಬ ಇರಾದೆ ಇದಿಯೇ ಎಂದು ಮುಖ್ಯನ್ಯಾಯಮೂರ್ತಿ ಅವರು ಅತೃಪ್ತಿ ವ್ಯಕ್ತಪಡಿಸಿದರು.

ಅಷ್ಟೆ ಅಲ್ಲ ಕೆಪಿಸಿಸಿ ನಡೆಯನ್ನು ತೀವ್ರ ತರಾಟೆಗೆ ತೆಗೆದುಕೊಂಡ ಪೀಠ, ನೀವು ಪಾದಯಾತ್ರೆಗೆ ಯಾರಿಂದ ಅನುಮತಿ ಪಡೆದಿದ್ದೀರಿ. ಕೊರೊನಾ ಮಾರ್ಗಸೂಚಿಗಳನ್ನು ಏಕೆ ಪಾಲನೆ ಮಾಡುತ್ತಿಲ್ಲ. ನಮಗೆ ಉತ್ತರಿಸಿ ಎಂದಿತು.

ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮತ್ತು ಕೆಪಿಸಿಸಿ ಇಬ್ಬರು ನ್ಯಾಯಾಲಯಕ್ಕೆ ತಕ್ಕ ಉತ್ತರ ನೀಡಬೇಕು ಎಂದು ವಿಚಾರಣೆಯನ್ನು ಜನವರಿ 14ಕ್ಕೆ ಮುಂದೂಡಿತು.

ಹೈಕೋರ್ಟ್ ಸರ್ಕಾರಕ್ಕೆ ಚಾಟಿ ಬೀಸುತ್ತಿದ್ದಂತೆ ಗೃಹ ಸಚಿವ ಅರಗ ಜ್ಞಾನೇಂದ್ರ ಹಿರಿಯ ಪೊಲೀಸ್ ಅಧಿಕಾರಿಗಳ ಜೊತೆ ಸಭೆ ನಡೆಸಿ, ಪಾದಯಾತ್ರೆಯನ್ನು ತಡೆಯಲು ಕೆಲವು ಕಠಿಣ ತೀರ್ಮಾನಗಳನ್ನು ಕೈಗೊಂಡಿದ್ದಾರೆ.

ಪಾದಯಾತ್ರೆ ಬಗ್ಗೆ ನ್ಯಾಯಾಲಯ ತರಾಟೆಗೆ ತೆಗೆದುಕೊಳ್ಳುತ್ತಿದ್ದಂತೆ ಅತ ಕೆಪಿಸಿಸಿ ಅಧ್ಯಕ್ಷರ ಜೊತೆ ಯಾತ್ರೆಯಲ್ಲಿ ನಡೆಗೆ ಹಾಕುತ್ತಿರುವ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ನ್ಯಾಯಾಲಯದ ಆದೇಶವನ್ನು ನಾವು ಗೌರವಿಸುತ್ತೇವೆ ಎಂದಿದ್ದಾರೆ.

## ಹೊನ್ನಾಳಿ ತಾಲ್ಲೂಕು ಬಿಜೆಪಿ ಅಧ್ಯಕ್ಷ ಸುರೇಶ್‌ಗೆ ಸೋಂಕು



ಹೊನ್ನಾಳಿ, ಜ.12- ತಾಲ್ಲೂಕು ಬಿಜೆಪಿ ಅಧ್ಯಕ್ಷ ಜೆ.ಕೆ. ಸುರೇಶ್‌ಗೆ ಕೊರೊನಾ ಪಾಸಿಟಿವ್ ಬಂದಿದ್ದು, ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ತಮ್ಮ ಸಂಪರ್ಕದಲ್ಲಿದ್ದ ಪಕ್ಷದ ಮುಖಂಡರು, ಕಾರ್ಯಕರ್ತರು, ಸಾರ್ವಜನಿಕರು ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದು ಅವರು ವಿನಂತಿಸಿದ್ದಾರೆ.

## ಎಎಸ್ಪಿಯಾಗಿ ಬಸರಗಿ

(1ನೇ ಪುಟದಿಂದ) ಮೂಲತಃ ವಿಜಾಪುರ ಜಿಲ್ಲೆಯ ಚಡಚಣ ತಾಲ್ಲೂಕಿನ ಕೆರೂರು ಗ್ರಾಮದವರಾದ ರಾಮಗೊಂಡ ಬಸರಗಿ ಅವರು ದಾವಣಗೆರೆ ಜಿಲ್ಲೆಗೆ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾಗಿ ವರ್ಗಾವಣೆಗೊಂಡಿದ್ದಾರೆ.

ಡಿಸಿಆರ್ ಬಿ ಡಿವೈಎಸ್ಪಿ ಬಿ.ಎಸ್. ಬಸವರಾಜ್ ಹಾಗೂ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಎಎಸ್ಪಿ ರಾಮಗೊಂಡ ಬಸರಗಿ ಅವರನ್ನು ಆತ್ಮೀಯವಾಗಿ ಸ್ವಾಗತಿಸಿದರು.

## ಹೊಸ ಯುವ ನೀತಿ: ಸಿಎಂ

(1ನೇ ಪುಟದಿಂದ) ಜೀವನದಲ್ಲಿ ಸ್ವಾಮಿ ವಿವೇಕಾನಂದರು ಸದಾ ಪ್ರಸ್ತುತವಾಗಿರುತ್ತಾರೆ. ಸಾರ್ಥಕತೆಯ ಹಾಗೂ ಸಾಧನೆಯ ಬದುಕನ್ನು ನಡೆಸಿ ಹಾಗೂ ಸಾವಿನ ನಂತರವೂ ಬದುಕುವ ರೀತಿಯನ್ನು ತಿಳಿಸಿದ್ದಾರೆ ಎಂದರು.

## ಮಲೇಬೆನ್ನೂರು ಪುರಸಭೆಯಲ್ಲಿ ಪತಿ - ಪತ್ನಿ ಇಬ್ಬರೂ ಸದಸ್ಯರು



ಮಲೇಬೆನ್ನೂರು, ಜ. 12- ಇಲ್ಲಿನ ಪುರಸಭೆಗೆ ಪತಿ ಸರ್ಕಾರದ ನಾಮ ನಿರ್ದೇಶನ ಸದಸ್ಯರಾಗಿದ್ದರೆ ಪತ್ನಿ ಮೊನ್ನೆ ನಡೆದ ಚುನಾವಣೆಯಲ್ಲಿ ಅಧಿಕ ಮತಗಳಿಂದ ಗೆದ್ದು ಪುರಸಭೆ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ಬಿಜೆಪಿ ಕಾರ್ಯಕರ್ತ ಪಿ.ಆರ್. ರಾಜು ಅವರು ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬಂದ ನಂತರ ಇಲ್ಲಿನ ಪುರಸಭೆಗೆ ನಾಮಿನಿ ಸದಸ್ಯರಾಗಿ ನೇಮಕಗೊಂಡಿದ್ದರು.

ಡಿ. 27ರಂದು ನಡೆದ ಪುರಸಭೆ ಚುನಾವಣೆಯಲ್ಲಿ ಪಿ. ಆರ್. ರಾಜು ಅವರ ಪತ್ನಿ ಶ್ರೀಮತಿ ಸುಧಾ ಅವರು 8ನೇ ವಾರ್ಡಿಗೆ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಆಯ್ಕೆಯಾಗಿದ್ದಾರೆ.

ಪತಿ-ಪತ್ನಿ ಇಬ್ಬರೂ ಪುರಸಭೆಯಲ್ಲಿ ಏಕಕಾಲಕ್ಕೆ ಸದಸ್ಯರಾಗುವ ಮೂಲಕ ಗಮನ ಸೆಳೆದಿದ್ದಾರೆ.

ಪಿ.ಆರ್. ರಾಜು ಅವರು ಈ ಹಿಂದೆ ಮಲೇಬೆನ್ನೂರು ಗ್ರಾ. ಪಂ. ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ.

**ಇನ್ನೊಂದು ವಿಶೇಷ :** ಪುರಸಭೆಯ ಮತ್ತೋರ್ವ ನಾಮಿನಿ ಸದಸ್ಯರಾಗಿರುವ ಗೌಡ್ರ ಮಂಜಣ್ಣ ಅವರು ಪುರಸಭೆ ಚುನಾವಣೆಯಲ್ಲಿ 6ನೇ ವಾರ್ಡಿನಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದಾರೆ.

ಅದೇ ರೀತಿ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದ ಆರೋಗ್ಯ ರಕ್ಷಾ ಸಮಿತಿ ಸದಸ್ಯರಾಗಿರುವ ಬಿ. ಮಂಜುನಾಥ್ ಅವರು ಪುರಸಭೆ ಚುನಾವಣೆಯಲ್ಲಿ 18ನೇ ವಾರ್ಡಿನಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲ್ಲುವ ಮೂಲಕ ಪುರಸಭೆಯನ್ನು ಪ್ರವೇಶಿಸಿದ್ದಾರೆ.


**16ನೇ ವರ್ಷದ ಪುಣ್ಯಸ್ಮರಣೆ**



ಎಸ್.ಎಸ್. ಮಂಜುನಾಥ್ M.A (ಕಬಡ್ಡಿ ಮಂಜು)
(ಇನ್ಸ್‌ಪೆಕ್ಟರ್ ಆಫ್ ಸೆಂಟ್ರಲ್ ಎಕ್ಸೈಜ್ & ಕಸ್ಟಮ್ಸ್) ದಾವಣಗೆರೆ. (ನಿಧನ 13.01.2006)
ನೀವು ನಮ್ಮನ್ನಗಲಿ 16 ವರ್ಷಗಳಾದರೂ, ನಿಮ್ಮ ನೆನಪು ನಮ್ಮ ಹೃದಯದಲ್ಲಿ ಸದಾ ಹಸಿರಾಗಿದೆ. ನಿಮ್ಮ ಸ್ಮರಣೆಯೇ ನಮಗೆ ದಾರಿ ದೀಪ...
ಶ್ರೀಮತಿ ಶೈಲಜಾ ಮಂಜುನಾಥ್ ಗೋಪನಾಳು, ಮಗ-ನೂತನ್ ಕುಮಾರ್
ಮೋಹನ್‌ರಾಜು ಜಿ.ಎಸ್. ಮತ್ತು ಸಹೋದರ, ಸಹೋದರಿಯರು, ಶ್ಯಾಮೇನಹಳ್ಳಿ ಬಂಧು-ಮಿತ್ರರು, ಗೋಪನಾಳು,
ಟಿ. ದ್ಯಾಮಪ್ಪ ಮತ್ತು ಮಕ್ಕಳು, ಹೂವಿನಹಡಗಲಿ.
ಬಿ.ಇ. ಶಿವಕುಮಾರ್ ನಿವೃತ್ತ E.E., ಮತ್ತು ಸಹೋದರರು, ಮರವಂಜಿ.
ಸೃಷ್ಠಿ ಕಬಡ್ಡಿ ಅಕಾಡೆಮಿ ಸದಸ್ಯರು, ಮಿತ್ರರು ಮತ್ತು ಕ್ರೀಡಾ ಪಟುಗಳು, ದಾವಣಗೆರೆ.

**9ನೇ ವರ್ಷದ ಪುಣ್ಯಸ್ಮರಣೆ**



ಡಿ.ಎಲ್.ಲೆಕ್ಕದಪ್ಪ
ನಿಧನ : 13.01.2013

ನೀವು ನಮ್ಮನ್ನಗಲಿ ಇಂದಿಗೆ 9 ವರ್ಷಗಳಾದವು. ನಿಮ್ಮ ಆದರ್ಶ ಮತ್ತು ನಡೆ ನುಡಿಯೇ ನಮಗೆ ದಾರಿ ದೀಪವಾಗಿವೆ. ಸದಾ ನಿಮ್ಮ ಸ್ಮರಣೆಯಲ್ಲಿರುವ,

*ದಡ್ಡನೆನಿಸಿದರೆ ಗೇಲಿ ಮಾಡುವರಯ್ಯ ...!*
*ಜಾಣನೆನಿಸಿದರೆ ಸಹಿಸರಯ್ಯ...! ಬೆಳೆದನೆನಿಸಿದರೆ*
*ತುಳಿಯಲು ಕಾಯುವರಯ್ಯ...! ಮುಗ್ದನೆನಿಸಿದರೆ ಬದುಕಲು*
*ಬಿಡರಯ್ಯ..! ಇನ್ನಾದರೂ ಅರಿತು ಜೀವಿಸಲು ಕಲಿಯಬೇಕಯ್ಯ...!!!*
- ದಾಲೆಬ

ಪುತ್ರ : ಬಸವರಾಜೇಂದ್ರ ಲೆಕ್ಕದ
ಸೊಸೆ : ಸುಧಾ ಬಸವರಾಜೇಂದ್ರ
ಮೊಮ್ಮಕ್ಕಳಾದ : ಚಿನ್ಮಯ್ ಬಿ. ಲೆಕ್ಕದ್, ಚಿಂತನ ಬಿ. ಲೆಕ್ಕದ್,
9972089722, 9113203775, ದಾವಣಗೆರೆ.


**ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ**

**ಗೋಪಾಲಪುರದ ಜಿ. ವೀರಭದ್ರಪ್ಪ ನಿಧನ**



ದಾವಣಗೆರೆ ಸಿಟಿ ಕೆ.ಬಿ. ಬಡಾವಣೆ, ತ್ರಿಶೂಲ್ ಟಾಕೀಸ್ ರಸ್ತೆ, ತ್ರಿಶೂಲ್ ಬೇಕರಿ ಹತ್ತಿರದ ನಿವಾಸಿ ಗೋಪಾಲಪುರದ ಜಿ. ವೀರಭದ್ರಪ್ಪ (66) ಇವರು ದಿನಾಂಕ 12.01.2022ರ ಬುಧವಾರ ತಡರಾತ್ರಿ 12.30ಕ್ಕೆ ನಿಧನರಾದರು ಪತ್ನಿ, ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 13.01.2022ರ ಗುರುವಾರ ಸಂಜೆ 4 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

## ರಸ್ತೆ ದುರಸ್ತಿ ಪಡಿಸದಿದ್ದರೆ ಆಟೋ ರ್‍ಯಾಲಿ

**ಹರಿಹರ**

ಹರಿಹರ, ಜ.12 - ನಗರದ ವಿವಿಧ ಬಡಾವಣೆಗಳ ರಸ್ತೆಗಳು ಯುಜಿಡಿ ಮತ್ತು 24x7 ನೀರಿನ ಕಾಮಗಾರಿಯಿಂದ ಹಾಳಾಗಿ ಸಾರ್ವಜನಿ ಕರಿಗೆ ಓಡಾಡಲು ತೊಂದರೆಗಳು ಆಗುತ್ತಿರುತ್ತವೆ. ಇದರ ವಿರುದ್ಧ ಆಟೋ ಸಂಚಾರ ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸಲಾಗುವುದು ಎಂದು ಆಟೋ ಚಾಲಕರು ಮತ್ತು ಮಾಲೀಕರ ಸಂಘದವರು ಹಾಗೂ ಕನ್ನಡ ಪರ ಸಂಘಟನೆಗಳು ತಿಳಿಸಿವೆ.

ಇಲ್ಲಿನ ರಚನಾ ಕ್ರೀಡಾ ಟ್ರಸ್ಟ್‌ನಲ್ಲಿ ನಿನ್ನೆ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಗ್ಗೆ ಈಗಾಗಲೇ ತಹಶೀಲ್ದಾರರ ಮತ್ತು ನಗರಸಭೆ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ನಾವು ನೀಡಿದ ಗಡುವು ಮುಗಿದರೂ ರಸ್ತೆ ದುರಸ್ತಿಯಾಗಿಲ್ಲ ಎಂದು ಹೇಳಿದ್ದಾರೆ.



31ನೇ ವಾರ್ಡಿನಲ್ಲಿ ಸಿಸಿ ರಸ್ತೆಗಳು ಯುಜಿಡಿ ಕಾಮಗಾರಿ ಹಾಳಾಗಿದ್ದು ಮತ್ತು ಅವೈಜ್ಞಾನಿಕವಾಗಿ ಹಾಕಿರುವ ರಸ್ತೆ ತಡೆಗಳಿಂದ ಆಟೋರಿಕ್ಷಾಗಳು ಬೈಕ್ ಸವಾರರು, ಶಾಲಾ - ಕಾಲೇಜು ಮಕ್ಕಳು ಮತ್ತು ಆಸ್ಪತ್ರೆಗೆ ಆಟೋದಲ್ಲಿ ಗರ್ಭಿಣಿಯರನ್ನು, ಅನಾರೋಗ್ಯ ಪೀಡಿತರನ್ನು ಕರೆದುಕೊಂಡು ಹೋಗುವುದಕ್ಕೆ ಬಹಳ ತೊಂದರೆಗಳಾಗುತ್ತಿವೆ ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ನಗರ ಆಟೋ ಚಾಲಕರು ಮತ್ತು ಮಾಲೀಕರ ಸಂಘದ ಗೌರವಾಧ್ಯಕ್ಷ ಸಿ.ಎಂ. ಸಿದ್ದಲಿಂಗ ಸ್ವಾಮಿ, ಅಧ್ಯಕ್ಷ ಜಿ.ಎಸ್.ಮೋಹನ್, ಉಪಾಧ್ಯಕ್ಷ ಟಿ.ಹೆಚ್. ನಾಗರಾಜ್, ಕನ್ನಡ ಪರ ಸಂಘಟನೆಯ ಮುಖಂಡರಾದ ಪ್ರೀತಂ ಬಾಬು, ಗೋವಿಂದ್, ಇಲಿಯಾಸ್ ಅಹಮದ್, ರಮೇಶ್ ಮಾನೆ, ಆನಂದ್, ಚಂದ್ರಪ್ಪ, ನಫೀಜ್ ಅಹ್ಮದ್ ಮತ್ತಿತರರು ಉಪಸ್ಥಿತರಿದ್ದರು.

# ತೋಟದ ಮಾಲೀಕರ ಮೇಲೆ ಹಲ್ಲೆ ಗ್ರಾಪಂ ಮಾಜಿ ಸದಸ್ಯನ ಮೇಲೆ ಕೇಸ್

ದಾವಣಗೆರೆ, ಜ.12- ತೋಟದಲ್ಲಿ ಟಿಸಿ ಹಾಗೂ 2 ವಿದ್ಯುತ್ ಕಂಬಗಳನ್ನು ಕದ್ದೊಯ್ಯಲು ಟ್ರ್ಯಾಕ್ಟರ್ ತಂದಿದ್ದನ್ನು ಪ್ರಶ್ನಿಸಿದ ತೋಟದ ಮಾಲೀಕ ದಂಪತಿ ಮೇಲೆ ಹಲ್ಲೆ ಮಾಡಿರುವುದಾಗಿ ಆರೋಪಿಸಿ ಚನ್ನಗಿರಿ ತಾಲ್ಲೂಕಿನ ಜೋಳದಾಳು ಗ್ರಾಮದ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಶಿವಕುಮಾರ ಅಲಿಯಾಸ್ ಕುಮಾರ ತಳವಾರ್ ಹಾಗೂ ಅದೇ ಗ್ರಾಮದ ಇತರೆ ನಾಲ್ವರ ವಿರುದ್ಧ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಜೋಳದಾಳು ಗ್ರಾಮದ ಗೌರಮ್ಮ (45), ಪತಿ ಮರಿಲಿಂಗಪ್ಪ ಮೇಲೆ ಇಂದು ಬೆಳಿಗ್ಗೆ ಅದೇ ಗ್ರಾಮದ ಶಿವಕುಮಾರ ಅಲಿಯಾಸ್ ಕುಮಾರ ತಳವಾರ ಎಂಬಾತ ಇತರೆ ನಾಲ್ವರೊಂದಿಗೆ ಸೇರಿ ಹಲ್ಲೆ ಮಾಡಿದ ಆರೋಪದಲ್ಲಿ ಪೊಲೀಸರು ಶಿವಕುಮಾರನನ್ನು ಸಂಜೆ ಬಂಧಿಸಿದ್ದಾರೆ.

ಇದೇ ವಿಚಾರಕ್ಕೆ ಎರಡೂ ಕಡೆಯವರ ಮಧ್ಯೆ ಮಾತಿಗೆ ಮಾತು ಬೆಳೆದು, ಗೌರಮ್ಮನಿಗೆ ಶಿವಕುಮಾರ ಅವಾಚ್ಯವಾಗಿ ಬೈದು, ದೈಹಿಕ ಹಲ್ಲೆ ಮಾಡಿದ್ದಾರೆ. ಬಿಡಿಸಿಕೊಳ್ಳಲು ಬಂದ ಗೌರಮ್ಮನ ಪತಿ ಮೇಲೂ ದೈಹಿಕ ಹಲ್ಲೆ ಮಾಡಿದ್ದಾನೆ ಎಂದು ಆರೋಪಿಸಲಾಗಿದೆ.

## ನಾಳೆ ಧನುರ್ಮಾಸ ತಿರುಕಲ್ಯಾಣ ಮಹೋತ್ಸವಂ

ದಾವಣಗೆರೆ, ಜ.12- ವಿಕಾಸತರಂಗಿಣಿ ಮತ್ತು ಆಂಡಾಳ್ ಗೋಷ್ಠಿ (ದಾವಣಗೆರೆ) ಇವರಿಂದ ನಾಡಿದ್ದು ದಿನಾಂಕ 14 ರ ಶುಕ್ರವಾರ ಸಂಜೆ 4.30 ಕ್ಕೆ ಎಂಸಿಸಿ ಎ ಬ್ಲಾಕ್‌ನಲ್ಲಿರುವ ತೊಗಟವೀರ ಕಲ್ಯಾಣ ಮಂಟಪದಲ್ಲಿ ಧನುರ್ಮಾಸ ತಿರುಕಲ್ಯಾಣ ಮಹೋತ್ಸವಂ ನಡೆಯುವುದು. ಅಂದು ಶ್ರೀ ಗೋದಾ ರಂಗನಾಥಸ್ವಾಮಿ ಮೆರವಣಿಗೆ, ಅನಂತರ ತಿರುಕಲ್ಯಾಣೋತ್ಸವ ನಡೆಯುವುದು.

## ವಿಕಾಸತರಂಗಿಣಿಯಿಂದ ಇಂದು ವೈಕುಂಠ ಏಕಾದಶಿ

**ದಾವಣಗೆರೆ :** ವಿಕಾಸತರಂಗಿಣಿ ಮತ್ತು ಆಂಡಾಳ್ ಗೋಷ್ಠಿ ಇವರಿಂದ ಇಂದು ವೈಕುಂಠ ಏಕಾದಶಿ ಪ್ರಯುಕ್ತ ಬೆಳಿಗ್ಗೆ 5.30 ರಿಂದ ರಾತ್ರಿ 10 ರವರೆಗೆ ಎಂಸಿಸಿ ಎ ಬ್ಲಾಕ್‌ನಲ್ಲಿರುವ ತೊಗಟವೀರ ಕಲ್ಯಾಣ ಮಂಟಪದಲ್ಲಿ ವೈಕುಂಠ ಏಕಾದಶಿ, ಉತ್ತರ ದ್ವಾರ ದರ್ಶನ ನಡೆಯುವುದು. ಬೆಳಿಗ್ಗೆ 10 ರಿಂದ ಭಗವದ್ಗೀತೆ ಸಾಮೂಹಿಕ ಪಾರಾಯಣ ನಡೆಯುವುದು.

# ಟ್ರಾಫಿಕ್ ಸಮಸ್ಯೆ ಬಗ್ಗೆ ಕ್ರಮ ಕೈಗೊಳ್ಳಲು ಶಾಸಕರ ಸೂಚನೆ

## ಜಗಳೂರು ತಾಲ್ಲೂಕು ಪಂಚಾಯ್ತಿ ಕೆಡಿಪಿ ಸಭೆ : ಸಿಗ್ನಲ್ ಲೈಟ್, ಸಿಸಿ ಕ್ಯಾಮೆರಾಕ್ಕೆ ಅನುದಾನದ ಭರವಸೆ



ಜಗಳೂರು, ಜ.12- ಪಟ್ಟಣದಲ್ಲಿ ಟ್ರಾಫಿಕ್ ಸಮಸ್ಯೆ ಹೆಚ್ಚಾಗಿದ್ದು, ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದ ಶಾಸಕ ಎಸ್.ವಿ. ರಾಮಚಂದ್ರ, ಪಟ್ಟಣದ ಎರಡು ವೃತ್ತಗಳಲ್ಲಿ ಸಿಗ್ನಲ್ ಲೈಟ್ಸ್ ಮತ್ತು ಸಿಸಿ ಕ್ಯಾಮೆರಾ ಅಳವಡಿಸಲು ಅನುದಾನ ನೀಡುವುದಾಗಿ ಹೇಳಿದರು.

ಇಲ್ಲಿನ ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಇಂದು ನಡೆದ ತ್ರೈಮಾಸಿಕ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅರಣ್ಯ ಇಲಾಖೆ ಅಧಿಕಾರಿಗಳ ಕಾರ್ಯವೈಖರಿ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಶಾಸಕರು, ಸಾಮಾಜಿಕ ಅರಣ್ಯ, ವಲಯ ಅರಣ್ಯ ಹಾಗೂ ಕೊಂಡುಕುರಿ ವನ್ಯಧಾಮ ಸೇರಿ ಮೂರು ಜನ ಅರಣ್ಯ ಅಧಿಕಾರಿಗಳಿದ್ದರೂ ತಾಲೂಕಿನಲ್ಲಿ ಅರಣ್ಯ ಅಭಿವೃದ್ಧಿಗೆ ಒತ್ತು ನೀಡಿಲ್ಲ. ರಸ್ತೆ ಬದಿ ಗಿಡಗಳು ಹಾಳಾಗುತ್ತಿವೆ. ರೈತರಿಗೂ ಸಹ ಗುಣಮಟ್ಟದ ಸಸ್ಯಗಳನ್ನು ನೀಡುತ್ತಿಲ್ಲ ಎಂದು ಶಾಸಕರು ಅಸಮಾಧಾನ ವ್ಯಕ್ತಪಡಿಸಿದರು.

ತಾಲ್ಲೂಕಿನಲ್ಲಿ ವಿಂಡ್ ಪವರ್ ಕಂಪನಿಗಳಿಂದ ಅರಣ್ಯ ಪ್ರದೇಶದಲ್ಲಿ ಫ್ಯಾನ್‌ಗಳನ್ನು ಅಳವಡಿಸಲಾಗುತ್ತಿದೆ. ಇದಕ್ಕೆ ಪರ್ಯಾಯವಾಗಿ ಅರಣ್ಯ ಜಮೀನನ್ನು ಇಲಾಖೆಗೆ ನೀಡಬೇಕಾಗಿರುತ್ತದೆ ಮತ್ತು ಅರಣ್ಯ ಅಭಿವೃದ್ಧಿಯನ್ನು ಮಾಡಬೇಕಾಗಿರುತ್ತದೆ. ಈ ಕಾರ್ಯವನ್ನು ಯಾವುದೇ ಕಂಪನಿಯವರು ಮಾಡಿಲ್ಲ. ತಕ್ಷಣವೇ ಕಂಪನಿಯವರಿಗೆ ನೋಟಿಸ್ ಜಾರಿ ಮಾಡಿ ಕ್ರಮಕೈಗೊಳ್ಳಬೇಕೆಂದು ವಲಯ ಅರಣ್ಯ ಅಧಿಕಾರಿ ಪ್ರಕಾಶ್ ಅವರಿಗೆ ಸೂಚಿಸಿದರು.

ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯಪಾಲಕ ಅಭಿಯಂತರ ರುದ್ರಪ್ಪ ಪ್ರಗತಿ ವರದಿ ನೀಡಿದಾಗ, ತಾಲ್ಲೂಕಿನಲ್ಲಿ ರಸ್ತೆಗುಂಡಿಗಳನ್ನು ಮುಚ್ಚಿಸುವ ಕಾಮಗಾರಿ ಸಮರ್ಪಕವಾಗಿ ನಡೆಯುತ್ತಿಲ್ಲ. ಸಾರ್ವಜನಿಕರಿಂದ ದೂರುಗಳು ಬರುತ್ತಿವೆ ಎಂದು ಶಾಸಕರು ಅಸಮಾಧಾನ ವ್ಯಕ್ತಪಡಿಸಿದರು.

ಕೊರೊನಾ ಮೂರನೇ ಅಲೆ ವ್ಯಾಪಕವಾಗಿ ಹರಡುತ್ತಿದ್ದು, ಆರೋಗ್ಯ ಇಲಾಖೆ ಅಧಿಕಾರಿಗಳು ಗ್ರಾಮ ಪಂಚಾಯತ್ ಪಿಡಿಓಗಳು ಸೇರಿದಂತೆ ತಾಲೂಕಿನ ಅಧಿಕಾರಿಗಳು ಕೇಂದ್ರಸ್ಥಾನದಲ್ಲಿದ್ದು, ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು.

ಸಾರ್ವಜನಿಕ ಆಸ್ಪತ್ರೆಯಲ್ಲಿ ಔಷಧ ದಾಸ್ತಾನಿರಬೇಕು. ವಿಶೇಷ ವಾರ್ಡ್ ಸಜ್ಜುಗೊಳಿಸಲು ಹಾಗೂ ಮುಂಜಾಗ್ರತಾ ಕ್ರಮವಾಗಿ ಕೋವಿಡ್ ಕೇರ್ ಸೆಂಟರ್ ಸ್ಥಾಪಿಸಲು ಅಗತ್ಯ ಕೈಗೊಳ್ಳಬೇಕೆಂದು ತಾಲೂಕು ವೈದ್ಯಾಧಿಕಾರಿ ಹಾಗೂ ಆಡಳಿತ ವೈದ್ಯಾಧಿಕಾರಿ ಡಾ.ನೀರಜ್ ಅವರಿಗೆ ಶಾಸಕರು ಆದೇಶಿಸಿದರು.

ತಾಲ್ಲೂಕಿನಲ್ಲಿ ಈವರೆಗೆ 32 ಕೊರನ ಪ್ರಕರಣಗಳು ವರದಿಯಾಗಿದ್ದು, ಇದರಲ್ಲಿ 12 ವಿದ್ಯಾರ್ಥಿಗಳು ಸಹ ಸೇರಿದ್ದಾರೆ. ಎಲ್ಲರಿಗೂ ಅಗತ್ಯ ಚಿಕಿತ್ಸೆ ನೀಡಲಾಗಿದೆ. ಎರಡನೇ ಡೋಸ್ ಲಸಿಕೆ ನೀಡುವ ಪ್ರಮಾಣ ಶೇಕಡ 80ರಷ್ಟು ಪ್ರಗತಿಯಾಗಿದ್ದು, ಶಾಲಾ ಮಕ್ಕಳಿಗೆ ನೀಡುವ ಲಸಿಕೆಯ ಪ್ರಗತಿ ಶೇಕಡ 58ರಷ್ಟು ಆಗಿದೆ ಎಂದು ತಾಲ್ಲೂಕು ತಾಲ್ಲೂಕು ವೈದ್ಯಾಧಿಕಾರಿ ಡಾ. ನಾಗರಾಜ್ ಮಾಹಿತಿ ನೀಡಿದರು.

ಗ್ರಾಮೀಣ ನೀರು ನೈರ್ಮಲ್ಯ ಇಲಾಖೆ ಸಹಾಯಕ ಕಾರ್ಯಪಾಲಕ ಅಭಿಯಂತರ ಸಾಧಿಕ್ ಉಲ್ಲಾ ಪ್ರಗತಿ ವರದಿ ನೀಡುತ್ತಾ, ತಾಲ್ಲೂಕಿನಲ್ಲಿ ಕೇಂದ್ರ ಪುರಸ್ಕೃತ ಯೋಜನೆ ಜಲಜೀವನ್ ಮಿಷನ್ ಯೋಜನೆಯಡಿ 22 ಗ್ರಾಮಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ. ಎರಡನೇ ಹಂತದ 77 ಹಳ್ಳಿಗಳಿಗೆ ನೀರು ಪೂರೈಸುವ ಕಾಮಗಾರಿಗೆ ಸರ್ವೆ ಕಾರ್ಯ ಮುಗಿದಿದ್ದು 5 ಕೋಟಿ ರೂಪಾಯಿಗಳ ಟೆಂಡರ್ ಕರೆಯಲಾಗುವುದು. ಜಲ ಮೂಲವಿಲ್ಲದ ಇತರ 69 ಹಳ್ಳಿಗಳಿಗೆ ಭದ್ರಾ ನದಿಯಿಂದ ನೀರು ಪೂರೈಸುವ ಯೋಜನೆ ಇದಾಗಿದೆ ಎಂದರು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ.ಮಹೇಶ್ವರಪ್ಪ, ಪಿಆರ್‌ಇಡಿ ಎಇಇ ಶಿವಮೂರ್ತಿ, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಶ್ರೀನಿವಾಸಲು, ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ವೆಂಕಟೇಶಮೂರ್ತಿ, ಬೆಸ್ಕಾಂ ಎಇಇ ಗಿರೀಶ್ ನಾಯಕ್ ಮುಂತಾದ ಅನುಷ್ಠಾನ ಅಧಿಕಾರಿಗಳು ಪ್ರಗತಿ ವರದಿ ನೀಡಿದರು.

ಸಭೆಯಲ್ಲಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಬಿ. ಲಕ್ಷ್ಮಿಪತಿ, ತಹಸೀಲ್ದಾರ್ ಸಂತೋಷ್ ಕುಮಾರ್, ಜಿಲ್ಲಾ ಯೋಜನಾ ನಿರ್ದೇಶಕರಾದ ಶ್ರೀಮತಿ ನಜ್ಮಾ, ವೃತ್ತನಿರೀಕ್ಷಕ ಮಂಜುನಾಥ ಪಂಡಿತ್ ಸೇರಿದಂತೆ ಅಧಿಕಾರಿಗಳು ಉಪಸ್ಥಿತರಿದ್ದರು.

## ನಗರದಲ್ಲಿ ವಿದ್ಯುತ್ ವ್ಯತ್ಯಯ

ಡೆಂಟಲ್ ಕಾಲೇಜ್ ರಸ್ತೆ, ಸಿಟಿ ಮೆಡಿಕಲ್ ಹಾಸ್ಪಿಟಲ್, ಮಾಮಸ್‌ಜಾಯಿಂಟ್ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ಇಂದು ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ಟಿ.ಸಿ ಲೇಔಟ್, ಎಲ್‌ಐಸಿ ಆಫೀಸ್, ಕೆಆರ್ ರಸ್ತೆ, ಜಗಳೂರು ಬಸ್‌ಸ್ಟಾಪ್, ಅರಳೀಮರ ಸರ್ಕಲ್, ನೂರಾನಿ ಆಟೋಸ್ಟ್ಯಾಂಡ್, ವೆಂಕಟೇಶ್ವರ ದೇವಸ್ಥಾನದ ಪಕ್ಕ, ಆನೆಕೊಂಡ ಹೊಸ ಲೇಔಟ್, ಉರ್ದು ಸ್ಕೂಲ್ ಹಿಂಭಾಗ, ಅಜಾದ್‌ನಗರ 10 ರಿಂದ 16ನೇ ಕ್ರಾಸ್‌ವರೆಗೆ, ಅಕ್ಸ ಮಸೀದಿ ಹಿಂಭಾಗ, ಬೀಡಿ ಲೇಔಟ್, ಅಜಾದ್ ನಗರ ಪೊಲೀಸ್ ಸ್ಟೇಷನ್, ಹೆಗಡೆ ನಗರ, ರಜಾವುಲ್ಲಾ ಮುಸ್ತಾಫಾ ನಗರ ಸ್ವಲ್ಪಭಾಗ, ಅಮ್ಮಜಾನ್, ಬಾಬಾಜಾನ್, ಜೋಗಲ್‌ಬಾಬಾ ಲೇಔಟ್, ಮಾಗಾನಹಳ್ಳಿ ರಸ್ತೆ ಹಳ್ಳದವರೆಗೆ, ಜಗಳೂರು ರಸ್ತೆ ಎಆರ್‌ಬಿ ಮಿಲ್, ಚಾಮರಾಜಪೇಟೆ, ವಾಟರ್ ಟ್ಯಾಂಕ್, ಎಸ್‌ಎಸ್ ಆಸ್ಪತ್ರೆ, ಬೇತೂರು ರಸ್ತೆ, ಚರ್ಚ್ ರಸ್ತೆ, ಮುನ್ಸಿಪಲ್ ಕಾಲೇಜ್, ಕೊಹಿನೂರ್ ಹೋಟೆಲ್ ಹಿಂಭಾಗ, ಮಾಗಾನಹಳ್ಳಿ ರಸ್ತೆ, ಹಾಸಬಾವಿ ಸರ್ಕಲ್, ಮಿಲ್ಲತ್ ಸ್ಕೂಲ್ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ಎಮ್‌ಬಿ ಕೇರಿ, ಹೊಂಡದ ಸರ್ಕಲ್ ಸುತ್ತಮುತ್ತ, ಕಾಯಿಪೇಟೆ, ಜಾಲಿನಗರ, ಟೀಚರ್ ಕಾಲೋನಿ, ಶಿವಾಜಿ ನಗರ, ಶಿವಾಜಿ ಸರ್ಕಲ್, ಚಲುವಾದಿ ಕೇರಿ, ಇಡಬ್ಲ್ಯೂಎಸ್ ಕಾಲೋನಿ, ಹಳೇಪೇಟೆ, ಬಾರ್‌ಲೈನ್ ರಸ್ತೆ, ಹಾಗೂ ಇತರೆ ಪ್ರದೇಶಗಳು.

ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್ ಮತ್ತು 'ಸಿ' ಬ್ಲಾಕ್, ಎಸ್‌ಪಿ ಆಫೀಸ್, ಆರ್‌ಟಿಓ ಆಫೀಸ್, ವಿಜಯನಗರ ಬಡಾವಣೆ, ರಾಜೀವ್ ಗಾಂಧಿ ಬಡಾವಣೆ, ಎಸ್‌ಪಿಎಸ್ ನಗರ 2ನೇ ಹಂತ, ಎಸ್‌ಎಮ್‌ಕೆ ನಗರ, ವಾಲ್ಮೀಕಿ ಸರ್ಕಲ್ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ವೀರಶೈವ ಮಹಾಸಭಾದ ಉಮೇಶ್ ಪಾಟೀಲ್ ಅವರಿಗೆ ಸನ್ಮಾನ



ದಾವಣಗೆರೆ, ಜ.12 - ಅಖಿಲ ಭಾರತ ವೀರಶೈವ-ಲಿಂಗಾಯಿತ ಮಹಾಸಭಾದ ಕೈಗಾರಿಕೆ ಮತ್ತು ವಾಣಿಜ್ಯ ಸಮಿತಿಯ ರಾಜ್ಯ ಅಧ್ಯಕ್ಷ ಉಮೇಶ್ ಪಾಟೀಲ್ ಅವರಿಗೆ ದೂಡಾ ಅಧ್ಯಕ್ಷ ಹಾಗೂ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ದೇವರಮನೆ ಶಿವಕುಮಾರ್ ಅವರು ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ರಾಷ್ಟ್ರೀಯ ಯುವ ಘಟಕದ ಕಾರ್ಯಕಾರಣಿ ಸದಸ್ಯರು ಮಾಜಿ ಪಾಲಿಕೆ ಸದಸ್ಯರಾದ ಶಿವನಗೌಡ ಟಿ.ಪಾಟೀಲ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಕರೇಶಿವಪ್ಪರ್ ಸಿದ್ದೇಶ್, ಕಾರ್ಯದರ್ಶಿ ಜಯಪ್ರಕಾಶ್ ಮಾಗಿ, ಆರೋಗ್ಯ ರಕ್ಷಾ ಸಮಿತಿಯ ಸದಸ್ಯ ಟಿಂಕರ್ ಮಂಜಣ್ಣ, ಗಿರೀಶ್ ಎಸ್.ದೇವರಮನೆ, ಜಿಲ್ಲಾ ಸಂಚಾಲಕ ಮೈಸೂರು ಮಠ ಮುಪ್ಪಯ್ಯ, ಶ್ರೀ ಕಂಠಯ್ಯ ಉಪಸ್ಥಿತರಿದ್ದರು

# ವೇತನ ಹೆಚ್ಚಳಕ್ಕೆ ಬಿಸಿಯೂಟ ತಯಾರಕರ ಒತ್ತಾಯ



ದಾವಣಗೆರೆ, ಜ.12- ವೇತನ ಹೆಚ್ಚಿಸುವಂತೆ ಒತ್ತಾಯಿಸಿ ಬಿಸಿಯೂಟ ತಯಾರಕರು ನಗರದಲ್ಲಿಂದು ಪ್ರತಿಭಟನೆ ನಡೆಸಿದರು.

ತಾಲ್ಲೂಕು ಕಚೇರಿ ಮುಂಭಾಗ ಅಕ್ಷರ ದಾಸೋಹ ಬಿಸಿಯೂಟ ತಯಾರಕರ ಫೆಡರೇಷನ್‌ನ ತಾಲ್ಲೂಕು ಸಮಿತಿ ನೇತೃತ್ವದಲ್ಲಿ ಜಮಾಯಿಸಿದ್ದ ಬಿಸಿಯೂಟ ತಯಾರಕರು, ತಮಗೆ 2021-22 ರ ಬಜೆಟ್ ನಲ್ಲಿ ವೇತನ ಹೆಚ್ಚಿಸುವಂತೆ ಉಪತಹಸೀಲ್ದಾರ್ ಮುಖೇನ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಸಲ್ಲಿಸಿದರು.

ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಆವರಗೆರೆ ಚಂದ್ರು ಮಾತನಾಡಿ, ಬಿಸಿಯೂಟ ತಯಾರಕರು ಕಳೆದ ಹತ್ತೊಂಬತ್ತು ವರ್ಷಗಳಿಂದ ಕನಿಷ್ಠ ವೇತನ ಇಲ್ಲದೆ ಗೌರವ ಸಂಭಾವನೆ ಪಡೆದು ದುಡಿಯುತ್ತಿರುವುದರಿಂದ ಜೀವನ ನಿರ್ವಹಿಸಲು ಕಷ್ಟವಾಗುತ್ತಿದೆ. ಆದ್ದರಿಂದ 2021-22 ರ ಬಜೆಟ್‌ನಲ್ಲಿ ಕನಿಷ್ಠ ವೇತನ ಜಾರಿಗೊಳಿಸುವಂತೆ ಒತ್ತಾಯಿಸಿದರು.

ಬಿಸಿಯೂಟ ತಯಾರಕರಿಗೆ ಕನಿಷ್ಠ 21 ಸಾವಿರ ವೇತನ ಜಾರಿಗೊಳಿಸಬೇಕು. ಉತ್ತರ ಪ್ರದೇಶ ರಾಜ್ಯದ ಅಲಹಾಬಾದ್ ಹೈಕೋರ್ಟ್ ಆದೇಶದಂತೆ ಅವರ ಕೆಲಸ ಖಾಯಂಗೊಳಿಸಿ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಬೇಕು. ಬಿಸಿಯೂಟ ತಯಾರಿಕೆ ಮತ್ತು ಪೂರೈಕೆಯನ್ನು ಖಾಸಗಿ ಸಂಸ್ಥೆಯವರಿಗೆ ವಹಿಸುವ ನಿರ್ಧಾರವನ್ನು ಸರ್ಕಾರ ಕೂಡಲೇ ಕೈಬಿಡಬೇಕು. ಬಿಸಿಯೂಟ ತಯಾರಿಕೆ ಯೋಜನೆ ಎನ್ನುವುದನ್ನು ಬದಲಾಯಿಸಿ ನಿರಂತರ ಕಾರ್ಯಕ್ರಮ ಎಂದು ಮಾರ್ಪಡಿಸಬೇಕು. 60 ವರ್ಷ ವಯೋಮಾನ ಮೀರಿ ನಿವೃತ್ತಿಯಾದವರಿಗೆ 2 ಲಕ್ಷ ರೂ. ಇಡಿಗಂಟು ನೀಡಬೇಕು ಮತ್ತು ಮಾಸಿಕ ನಿವೃತ್ತಿ ಪಿಂಚಣಿ 3 ಸಾವಿರ ರೂ. ಜಾರಿಗೊಳಿಸಬೇಕು ಎಂಬಿತ್ಯಾದಿ ಬೇಡಿಕೆಗಳ ಈಡೇರಿಕೆಗೆ ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಬಿಸಿಯೂಟ ತಯಾರಕರ ತಾಲೂಕು ಸಮಿತಿ ಅಧ್ಯಕ್ಷೆ ಮಳಲಕೆರೆ ಜಯಮ್ಮ, ಕಾರ್ಯದರ್ಶಿ ಜ್ಯೋತಿಲಕ್ಷ್ಮಿ, ಖಜಾಂಚಿ ಪದ್ಮಾ, ಜಿಲ್ಲಾ ಸಮಿತಿ ಉಪಾಧ್ಯಕ್ಷೆ ಸರೋಜಾ, ಜಿಲ್ಲಾ ಸಂಚಾಲಕ ಸಿ. ರಮೇಶ್, ಮುಖಂಡರಾದ ನರೇಗಾ ರಂಗನಾಥ್, ಪರಶುರಾಮ್, ವನಜಾಕ್ಷಮ್ಮ, ಶೋಭಾ, ಪಾರ್ವತಿಬಾಯಿ, ಮಂಜುಳ ಸೇರಿದಂತೆ ಇತರರು ಭಾಗವಹಿಸಿದ್ದರು.

## ನಗರದಲ್ಲಿ ನಾಳೆ ಸೂರ್ಯ ನಮಸ್ಕಾರ

ದಾವಣಗೆರೆ, ಜ.12- ಜಿಲ್ಲಾ ಯೋಗ ಒಕ್ಕೂಟದಿಂದ ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಆಶ್ರಯದಲ್ಲಿ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ನೇತೃತ್ವದಲ್ಲಿ ನಾಡಿದ್ದು ದಿನಾಂಕ 14 ರಂದು ಬೆಳಿಗ್ಗೆ 6 ಗಂಟೆಗೆ ಮಠದ ಆವರಣದಲ್ಲಿ ಸೂರ್ಯ ನಮಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಯೋಗ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ವಾಸುದೇವ ರಾಯ್ಕರ್ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಭಾರತ ಸರ್ಕಾರ, ಆಯುಷ್ ಮಂತ್ರಾಲಯ ಮತ್ತು ನವದೆಹಲಿಯ ಮೊರಾರ್ಜಿ ದೇಸಾಯಿ ಯೋಗ ಸಂಸ್ಥೆ ವತಿಯಿಂದ ಆಯೋಜಿಸಲಾಗಿರುವ ಮಕರ ಸಂಕ್ರಾಂತಿ ಸಾಮೂಹಿಕ ಸೂರ್ಯ ನಮಸ್ಕಾರವನ್ನು ಅಜಾದಿ ಕಾ ಅಮೃತ ಮಹೋತ್ಸವದ ಪ್ರಯುಕ್ತ ಪಂಚಮಸಾಲಿ ಮಠದ ಆವರಣದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಆಸಕ್ತರು ಕೋವಿಡ್ ಮಾರ್ಗಸೂಚಿ ಪಾಲಿಸುವ ಮೂಲಕ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು ಎಂದು ಹೇಳಿದರು.

ಯೋಗಯುಕ್ತ ರೋಗ ಮುಕ್ತ ಸಮಾಜಕ್ಕಾಗಿ ಮರಕ ಸಂಕ್ರಾಂತಿಯಂದು ಜಿಲ್ಲೆಯ ಜನರೆಲ್ಲರೂ ಮನೆಯಲ್ಲಿಯೇ 13 ಸುತ್ತು ಸೂರ್ಯ ನಮಸ್ಕಾರ ಮಾಡುವ ಮೂಲಕ ವಿಶ್ವ ದಾಖಲೆಯ 75 ಕೋಟಿ ಸೂರ್ಯ ನಮಸ್ಕಾರ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆಯೂ ಅವರು ಕರೆ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಆಯುಷ್ ನಿವೃತ್ತ ವೈದ್ಯಾಧಿಕಾರಿ ಯು.ಸಿದ್ದೇಶ್, ಪ್ರಕಾಶ್ ಉತ್ತಂಗಿ, ಜಯಣ್ಣ ಬಾದಾಮಿ, ನಿರಂಜನ್, ಕೀರ್ತಿರಾಜ ಹೋಲೂರು, ರಾಜು ಬದ್ದಿ, ವಿರೂಪಾಕ್ಷ ಜವಳಿ ಉಪಸ್ಥಿತರಿದ್ದರು.

## ಧೂಳೆಹೊಳೆ : ಸಂಕ್ರಾಂತಿ ಮುಂದಕ್ಕೆ

ಮಲೇಬೆನ್ನೂರು, ಜ.12- ಧೂಳೆಹೊಳೆ ಗ್ರಾಮದ ತುಂಗಭದ್ರಾ ನದಿ ತಟದಲ್ಲಿರುವ ಜಿಎಂಸಿಜಿ ಪ್ರೌಢಶಾಲೆ ಮುಂಭಾಗದಲ್ಲಿರುವ ಸಮುದಾಯ ಭವನದಲ್ಲಿ ನಾಡಿದ್ದು ದಿನಾಂಕ 14 ರಂದು ಆಚರಿಸುವ ಸಾಮೂಹಿಕ ಸಂಕ್ರಾಂತಿ ಹಬ್ಬವನ್ನು ಕೋವಿಡ್ ಕಾರಣದಿಂದಾಗಿ ಮುಂದೂಡಲಾಗಿದೆ ಎಂದು ಸಿರಿಗೆರೆ ನಾಗನಗೌಡ್ರು ತಿಳಿಸಿದ್ದಾರೆ.

## ಜಿಲ್ಲೆಯಲ್ಲಿ 137 ಜನರಿಗೆ ಪಾಸಿಟಿವ್

(1ನೇ ಪುಟದಿಂದ) 18 ವರ್ಷದೊಳಗಿನ 63 ಮಕ್ಕಳಲ್ಲಿ ಕೋವಿಡ್ ಪಾಸಿಟಿವ್ ದೃಢಪಟ್ಟಿದ್ದು, ಈ ಪೈಕಿ ದಾವಣಗೆರೆಯ 8, ಚನ್ನಗಿರಿ 48, ಜಗಳೂರು 6 ಶಾಲಾ ಮಕ್ಕಳು ಹಾಗೂ ಹರಿಹರದಲ್ಲಿನ ಒಂದು ವರ್ಷದ ಮಗುವಿನಲ್ಲಿ ಸೋಂಕು ಕಾಣಿಸಿದೆ.

## ಗ್ರಾಮಾಂತರದಲ್ಲಿಂದು ವಿದ್ಯುತ್ ಇಲ್ಲ

ಹೊಸ ಬಿಸಲೇರಿ, ಹಳೇ ಬಿಸಲೇರಿ, 6ನೇ ಕಲ್ಲು, 7ನೇ ಕಲ್ಲು ಮಾರ್ಗಗಳಲ್ಲಿ ಇಂದು ಬೆಳಿಗ್ಗೆ 9 ರಿಂದ ಸಂಜೆ 5 ರವರೆಗೆ ವಿದ್ಯುತ್ ಇರುವುದಿಲ್ಲ.

## ಜಗಳೂರಿನಲ್ಲಿ ಚಮನ್ ಷಾ ವಲಿ ಉರುಸು

ಜಗಳೂರಿನ ಹಜರತ್ ಚಮನ್ ಷಾ ವಲಿಯವರ ಉರುಸು ಕಾರ್ಯಕ್ರಮವು ಇಂದು ನಡೆಯಲಿದೆ ಎಂದು ದರ್ಗಾ ಕಮಿಟಿ ಸದಸ್ಯರು ತಿಳಿಸಿದ್ದಾರೆ.

## ನಗರದ ಶ್ರೀ ವಿಠಲ ಮಂದಿರದಲ್ಲಿ ಇಂದು 'ವೈಕುಂಠ ಏಕಾದಶಿ'



ಮಹಾರಾಜ ಪೇಟೆಯಲ್ಲಿರುವ ಶ್ರೀ ಭಾವಸಾರ ಕ್ಷತ್ರಿಯ ದೈವ ಮಂಡಳಿ 'ವ' ಭಜನಾ ಮಂಡಳಿಯಿಂದ ವಿಠ್ಠಲ ಮಂದಿರದಲ್ಲಿ ಇಂದು ವೈಕುಂಠ ಏಕಾದಶಿ ಆಚರಿಸಲಾಗುವುದು.

ಬೆಳಿಗ್ಗೆ 5 ರಿಂದ ಶ್ರೀ ವಿಠ್ಠಲ ರುಕ್ಮಿಣಿ ದೇವರಿಗೆ ಅಭಿಷೇಕ, ಕಾಕಡಾರತಿ, ಭಜನೆ, ಹರಿಪಾಠ ನಡೆಯುವುದು. ಬೆಳಿಗ್ಗೆ 8 ರಿಂದ ಶ್ರೀ ಗೀತಾ ಜ್ಞಾನೇಶ್ವರಿ ಸಾಮೂಹಿಕ (ಭಗವದ್ಗೀತೆ) ಗ್ರಂಥ ಪಾರಾಯಣ ನಂತರ ಮಹಾ ಮಂಗಳಾರತಿ, ಶ್ರೀ ಭಾವಸಾರ ಕ್ಷತ್ರಿಯ ತರುಣ ಮಂಡಳಿ ವತಿಯಿಂದ ಶ್ರೀ ವಿಠ್ಠಲ ರುಕ್ಮಿಣಿ ದೇವರ ಪಾದ ದರ್ಶನವನ್ನು ಭಕ್ತಾದಿಗಳಿಗೆ ಏರ್ಪಡಿಸಲಾಗಿದೆ.

ಸಂಜೆ 5 ಗಂಟೆಗೆ ಮಹಿಳಾ ಮಂಡಳಿಯವರಿಂದ ಭಜನೆ ಕಾರ್ಯಕ್ರಮ ನಡೆಯಲಿದೆ. ರಾತ್ರಿ 7 ಗಂಟೆಗೆ ಶ್ರೀ ಹ.ಭ.ಪ ತುಕಾರಾಮ ಪವಾರ್ ಸಾ. (ಕೊಲ್ಲಾಪುರ) ಇವರಿಂದ ಕೀರ್ತನೆ ನಡೆಯಲಿದೆ ಎಂದು ಭಜನಾ ಮಂಡಳಿ ಅಧ್ಯಕ್ಷ ನಿಂಗಸ್ವಾಮಿರಾವ್ ಖಮಿತ್ಕರ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಪಿ.ಬಿ. ರೋಡ್, ರಿಲಯನ್ಸ್ ಮಾರ್ಕೆಟ್, ಸುಲ್ತಾನ್ ಡೈಮಂಡ್ಸ್, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ನಿಟುವಳ್ಳಿ, ನಿಟುವಳ್ಳಿ ಹೊಸಬಡಾವಣೆ, ದುರ್ಗಾಂಬಿಕ ದೇವಸ್ಥಾನ ಸುತ್ತಮುತ್ತ, 60 ಅಡಿ ರಸ್ತೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳು.

ಬಾಪೂಜಿ ಬ್ಯಾಂಕ್ (ಹದಡಿ ರಸ್ತೆ), ಬಾಪೂಜಿ ಡೆಂಟಲ್ ಕಾಲೇಜ್ ಮತ್ತು ಬಾಪೂಜಿ ಆಸ್ಪತ್ರೆ, ಜೆ.ಜೆ.ಎಮ್. ಮೆಡಿಕಲ್ ಕಾಲೇಜ್, ಚಿಗಟೇರಿ ಜಿಲ್ಲಾ ಆಸ್ಪತ್ರೆ ಮತ್ತು ವಸತಿ ಗೃಹಗಳು, ಮ್ಯಾಕ್ಸ್ ಷೋ ರೂಂ, ಬಿ.ಎಸ್. ಚನ್ನಬಸಪ್ಪ ಎಕ್ಸ್‌ಕ್ಲೂಸಿವ್ ಷೋರೂಂ, ಕೆ.ಎಫ್.ಸಿ., ಡಿ.ಆರ್.ಎಮ್. ಕಾಲೇಜ್, ಎ.ಆರ್.ಜಿ. ಕಾಲೇಜ್ ಹಾಗೂ ಸುತ್ತಮುತ್ತಲ ಪ್ರದೇಶಗಳು.

ನಿಜಲಿಂಗಪ್ಪ ಬಡಾವಣೆ, ರಿಂಗ್ ರೋಡ್, ಕುಂದವಾಡ ರಸ್ತೆ, ಯಲ್ಲಮ್ಮ ನಗರ, ವಿನೋಬನಗರ 4ನೇ ಮೇನ್, 3ನೇ ಮೇನ್ ಹಾಗೂ ಸುತ್ತಮುತ್ತಲ ಪ್ರದೇಶಗಳು.

ಹಳೆ ಬಸ್ ನಿಲ್ದಾಣ, ಹೈಸ್ಕೂಲ್ ಬಸ್ ನಿಲ್ದಾಣ, ಜಾಯ್‌ಲುಕಾಸ್, ಬಿಗ್‌ಬಜಾರ್, ಪಿ.ಡಬ್ಲ್ಯೂ.ಡಿ ವಸತಿ ಗೃಹಗಳು, ಆಕ್ಸಿಸ್ ಬ್ಯಾಂಕ್ ಕಟ್ಟಡ, ಸುರಭಿ ಅಪಾರ್ಟ್‌ಮೆಂಟ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಇ.ಎಸ್.ಐ ಆಸ್ಪತ್ರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ದಂತ ವೈದ್ಯಕೀಯ ಸ್ನಾತಕೋತ್ತರ ನೇಮಕಕ್ಕೆ ಸುಪ್ರೀಂ ಪ್ರಶ್ನೆ

(1ನೇ ಪುಟದಿಂದ) ವಿದ್ಯಾರ್ಥಿಗಳಿಗೆ ಸೀಟು ನೀಡಿರುವ ಕಾರಣ ಕೇಳಿರುವ ನ್ಯಾಯಾಲಯ, ವಾರದಲ್ಲಿ ಉತ್ತರ ನೀಡುವಂತೆ ಕೇಳಿದೆ.

ಈ ವಿಷಯದ ಬಗ್ಗೆ ಕೇಂದ್ರ ಸರ್ಕಾರ ಹಾಗೂ ಭಾರತೀಯ ದಂತ ವೈದ್ಯಕೀಯ ಮಂಡಳಿ ಸಹ ಉತ್ತರಿಸಬೇಕು ಎಂದು ನ್ಯಾಯಾಲಯ ತಿಳಿಸಿದೆ.

# ಶಸ್ತ್ರ ಚಿಕಿತ್ಸೆ : ಮಹಿಳೆಯ ಗರ್ಭಕೋಶದಲ್ಲಿದ್ದ 7 ಕೆ.ಜಿ. ತೂಕದ ಗಡ್ಡೆ ಹೊರ ತೆಗೆದ ವೈದ್ಯರು



ಮಲೇಬೆನ್ನೂರು, ಜ. 12- ಮಹಿಳೆಯ ಗರ್ಭಕೋಶದಲ್ಲಿದ್ದ 7 ಕೆ.ಜಿ. ತೂಕದ ಫೈಬ್ರಾಯ್ಡ್ ಮಾಂಸದ ಗಡ್ಡೆಯನ್ನು ಶಸ್ತ್ರ ಚಿಕಿತ್ಸೆ ಮೂಲಕ ಹೊರ ತೆಗೆಯುವಲ್ಲಿ ಮಲೇಬೆನ್ನೂರಿನ ಅಪೂರ್ವ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯರು ಯಶಸ್ವಿಯಾಗಿದ್ದಾರೆ.

ಪಟ್ಟಣದ ಸೀಮಾ ಬಾನು (ಹೆಸರು ಬದಲಿಸಲಾಗಿದೆ) ಎಂಬ ಮಹಿಳೆಗೆ ಒಂದೂವರೆ ವರ್ಷದ ಹಿಂದೆ ಮದುವೆಯಾಗಿತ್ತು. ಒಂದು ವರ್ಷದ ನಂತರ ಗರ್ಭಧಾರಣೆಯಾಗದಿದ್ದಾಗ ದಾವಣಗೆರೆಯಲ್ಲಿ ವೈದ್ಯರ ಬಳಿ ಚಿಕಿತ್ಸೆ ಕೊಡಿಸಲಾಗಿತ್ತು. ಅದು ಫಲಪ್ರದವಾಗಿಲ್ಲ. ನಂತರ ಮಲೇಬೆನ್ನೂರಿನಲ್ಲಿ ಹೆರಿಗೆ ಮತ್ತು ಸ್ತ್ರೀ ರೋಗ ತಜ್ಞರಾದ ಡಾ. ಅಪೂರ್ವ ಅವರ ಬಳಿ ತಪಾಸಣೆಗೊಳಪಡಿಸಿದಾಗ ಸ್ಕ್ಯಾನಿಂಗ್‌ನಲ್ಲಿ ಗಡ್ಡೆ ಇರುವುದು ಗೊತ್ತಾಗಿದೆ.

ಈ ಗಡ್ಡೆ ಬೆಳೆಯುತ್ತಿರುವುದರಿಂದ ಮಹಿಳೆಗೆ ಗರ್ಭಧಾರಣೆಗೆ ತೊಂದರೆ ಹಾಗೂ ಮೂತ್ರ ವಿಸರ್ಜನೆ ಹಾಗೂ ಹೊರಗಡೆ ಹೋಗಲೂ (ಬೇಧಿ) ತೊಂದರೆಯಾಗುತ್ತಿತ್ತು.

ಜೊತೆಗೆ ಮಹಿಳೆಯಲ್ಲಿ ರಕ್ತದ ಪ್ರಮಾಣ 5ಕ್ಕೆ ತಲುಪಿತ್ತು. 8 ಬಾಟಲ್ ರಕ್ತವನ್ನು ಮಹಿಳೆಗೆ ಹಾಕಿದ ನಂತರ ಶಸ್ತ್ರ ಚಿಕಿತ್ಸೆ ಮಾಡಿ ಗರ್ಭಕೋಶದ ಗೋಡೆಯಲ್ಲಿ ಬೆಳೆದಿದ್ದ 7 ಕೆ.ಜಿ. ತೂಕದ ಫೈ ಬ್ರಾಯ್ಡ್ ಗಡ್ಡೆಯನ್ನು ಹೊರ ತೆಗೆದಿದ್ದೇವೆ. ಗಡ್ಡೆ ಗರ್ಭಕೋಶದ ಒಳಪದರು ತಲುಪಿದ್ದರಿಂದ ಗರ್ಭಕೋಶವನ್ನು ತೆಗೆಯಬೇಕಾದ ಅನಿವಾರ್ಯತೆ ಇದ್ದುದರಿಂದ ಮಹಿಳೆಯ ಹಿತದೃಷ್ಟಿಯಿಂದ ಇದೇ ವೇಳೆ ಗರ್ಭಕೋಶವನ್ನು ತೆಗೆದಿದ್ದೇವೆ ಎಂದು ಡಾ. ಅಪೂರ್ವ 'ಜನತಾವಾಣಿ'ಗೆ ಮಾಹಿತಿ ನೀಡಿದರು.

ಈ ಗಡ್ಡೆ ಕ್ಯಾನ್ಸರ್ ಗಡ್ಡೆಯಾಗಿ ಪರಿವರ್ತನೆ ಆಗುವುದು ಬಹಳ ವಿರಳವಾಗಿದ್ದು, ಇಂತಹ ಸಮಸ್ಯೆಯಿರುವ ಮಹಿಳೆಯರು ಭಯ ಪಡದೆ ವೈದ್ಯರ ಬಳಿ ಚಿಕಿತ್ಸೆ ಪಡೆದುಕೊಳ್ಳಬೇಕೆಂದು ಡಾ. ಅಪೂರ್ವ ಮನವಿ ಮಾಡಿದ್ದಾರೆ.

ಹೆರಿಗೆ ಮತ್ತು ಸ್ತ್ರೀರೋಗ ತಜ್ಞರಾದ ಡಾ. ಪ್ರೀತಿ ಕೆ. ಅಪೂರ್ವ, ಜನರಲ್ ಸರ್ಜನ್ ಡಾ. ವಿಜಿ ಪಾಟೀಲ್, ಅರಿವಳಿಕೆ ತಜ್ಞ ಡಾ. ಅಬ್ದುಲ್, ಸಿಬ್ಬಂದಿಗಳಾದ ಮಂಜುನಾಥ್, ಮಂಜುಳಾ, ಸೀಮಾ ಮತ್ತಿತರರು ಶಸ್ತ್ರ ಚಿಕಿತ್ಸೆಯ ತಂಡದಲ್ಲಿದ್ದರು.

ಜ. 3 ರಂದು ನಡೆದ ಶಸ್ತ್ರ ಚಿಕಿತ್ಸೆ ನಂತರ ಮಹಿಳೆ ಸಂಪೂರ್ಣವಾಗಿ ಗುಣಮುಖರಾಗಿದ್ದಾರೆ ಎಂದು ಡಾ. ಅಪೂರ್ವ ಸಂತಸ ವ್ಯಕ್ತಪಡಿಸಿದರು.

ಡಾ. ಅಪೂರ್ವ ಅವರು ಈ ಹಿಂದೆ 2011-12ನೇ ಸಾಲಿನಲ್ಲಿ ಮಲೇಬೆನ್ನೂರು ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುವ ಸಂದರ್ಭದಲ್ಲೂ ಇಬ್ಬರ ಮಹಿಳೆಯ ಹೊಟ್ಟೆಯಲ್ಲಿ ಬೆಳೆದಿದ್ದ 5 ಕೆ.ಜಿ. 300 ಗ್ರಾಂ ಮತ್ತು 4 ಕೆ.ಜಿ. 400 ಗ್ರಾಂ ತೂಕದ ಗಡ್ಡೆಗಳನ್ನು ಯಶಸ್ವಿಯಾಗಿ ಶಸ್ತ್ರ ಚಿಕಿತ್ಸೆ ಮೂಲಕ ಹೊರ ತೆಗೆದಿದ್ದರು.

ನಂತರ ಅಪೂರ್ವ ಆಸ್ಪತ್ರೆಯಲ್ಲಿ ತ್ರಿವಳಿ ಮಕ್ಕಳ ಹೆರಿಗೆಯನ್ನು ಸಹಜವಾಗಿ ಮಾಡಿಸುವ ಮೂಲಕ ಎಲ್ಲರ ಗಮನ ಸೆಳೆದಿದ್ದರು. ಡಾ. ಅಪೂರ್ವ ಅವರು ಹಿರಿಯ ವೈದ್ಯ ಡಾ. ಟಿ. ಬಸವರಾಜ್ ಮತ್ತು ಜಿ.ಪಂ. ಮಾಜಿ ಸದಸ್ಯೆ ಚಿದಾನಂದಮ್ಮ ದಂಪತಿ ಪುತ್ರ.


**ಮಾಂತ್ರಿಕ ಮೋಡಿ ಬೆಟ್ಟಪ್ಪ ಜ್ಯೋತಿಷ್ಯರು**
**Most Popülr Astrologer**



ಉಚಿತ ಭವಿಷ್ಯ ಖಚಿತ ಪರಿಹಾರ, ಫೋನ್ ಮೂಲಕ ಸಂಪರ್ಕಿಸಿ
ನಂ.1 ವಶೀಕರಣ ಸ್ಪೆಷಲಿಸ್ಟ್, ನೀವು ಇಷ್ಟಪಟ್ಟವರು ನಿಮ್ಮಂತಾಗಲು
ನಿಮ್ಮ ಸಮಸ್ಯೆಗಳೇನು ? ನಿಮ್ಮ ಸಂಕಷ್ಟಗಳೇನು ? ನಮ್ಮಲ್ಲಿ ಕೇಳಿ ತಿಳಿಯಿರಿ
ದೇವಿ ಉಪಾಸಕರು, ಸರ್ವಮಂತ್ರ ವಿದ್ಯೆಯಿಂದ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮದುವೆ ವಿಳಂಬ, ಮಾಟ-ಮಂತ್ರ, ಯಂತ್ರ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲೈಂಗಿಕ ಗುಪ್ತ ಮಾನಸಿಕ ಚಿಂತೆ, ದಾಂಪತ್ಯ ಸಮಸ್ಯೆ, ಬಲಿಷ್ಠ ಗಿಡಮೂಲಿಕೆಗಳಿಂದ ಪರಿಹಾರ ಮಾಡಿತ್ತಾರೆ.
ವಿ.ಸೂ. : ನಿಮ್ಮ ಯಾವುದೇ ಸಮಸ್ಯೆಗಳಿಗೆ 9 ದಿನಗಳೊಳಗೆ 100% ಪರಿಹಾರ ಶತಸಿದ್ಧ. ನಿಮ್ಮ ದಾವಣಗೆರೆ ನಗರದಲ್ಲಿ ಇಂದೇ ಭೇಟಿ ಕೊಡಿ
ಮೊಬೈಲ್ : **89716 99826**


**ಆರ್.ಎ.ನಂ. 101/2010**

**ಮಾನ್ಯ 2ನೇ ಹೆಚ್ಚುವರಿ ಜಿಲ್ಲಾ ವ ಸತ್ರ ನ್ಯಾಯಾಧೀಶರು ರಾಣೇಬೆನ್ನೂರು.**

**ಇವರ ನ್ಯಾಯಾಲಯದಲ್ಲಿ**

ಮೇಲ್ಮನವಿದಾರರು : **ಕು. ಶೃತಿ ಶಿವಯೋಗಿ, ಹೊಸಂಗಡಿ ಮತ್ತು ಇತರರು** ವಿರುದ್ಧ/- ಎದುರುದಾರರು : **ಶ್ರೀಮತಿ ಪಾರ್ವತವ್ವ ಶಿವಲಿಂಗಪ್ಪ ಕುಂಬಾರ ಮತ್ತು ಇತರರು.**

**(ಸಿ.ಪಿ.ಸಿ. ಕ್ಷಮಾದೇಶ 5 ನಿಯಮ 20 ಕೆಳಗೆ ನೋಟಿಸು ಪತ್ರಿಕಾ ಪ್ರಕಟಣೆ ಮೂಲಕ)**

ಮೇಲ್ಮನವಿದಾರ ನಂ. 11(ಬಿ) ಶ್ರೀ ವಿಜಯ ತಂದೆ ಶಿವಪ್ಪ ಪಟ್ಟಣಶೆಟ್ಟಿ ವಯಾ:60 ವರ್ಷ ಉದ್ಯೋಗ : ನಿವೃತ್ತ ನೌಕರರು, ಸಾ॥ ದೇವರಾಜ ಅರಸ್ ಬಡಾವಣೆ, ದಾವಣಗೆರೆ.

ಮೇಲ್ಕಂಡ ಮೇಲ್ಮನವಿಯನ್ನು ಮೇಲ್ಮವಿದಾರರೂ ಪಾಲಿವಿಭಾಗ ಹಾಗೂ ಕಬ್ಜೆ ಕುರಿತು ಎದುರುದಾರರ ವಿರುದ್ಧ ಮೇಲ್ನವಿ ಸಲ್ಲಿಸಿದ್ದು, ನಿಮ್ಮ ತಾಯಿ ಪೋತಿಯಾದ ನಂತರ ಅವರ ವಾರಸುದಾರರಾದ ನಿಮ್ಮನ್ನು ಸದರಿ ಮೇಲ್ಮನವಿಯಲ್ಲಿ ಮದ್ಯಂತರ ಅರ್ಜಿ ನಂ 11ನೇದ್ದರ ಮೇಲೆ ಮೇಲ್ಮನವಿದಾರ ನಂ. 11 (ಬಿ) ಅಂತಾ ಸೇರಿದ್ದು, ಅದಕ್ಕೆ ನಿಮ್ಮದು ಏನಾದರೂ ತಕರಾರು ವಗೈರೆ ಇದ್ದಲ್ಲಿ ನೀವಾಗಲಿ ಅಥವಾ ನಿಮ್ಮ ತರ್ಫೆ ವಕೀಲರಾಗಲಿ ಮಾನ್ಯ ನ್ಯಾಯಾಲಯದ ಮುಂದೆ ದಿನಾಂಕ : 22.02.2022 ನೇ ಇಸ್ವಿ ದಿವಸ ಮುಂಜಾನೆ 11.00 ಘಂಟೆಗೆ ಮಾನ್ಯ ನ್ಯಾಯಾಲಯದ ಮುಂದೆ ಹಾಜರಾಗಿ, ನಿಮ್ಮ ತಕರಾರು ಏನಾದರೂ ಇದ್ದಲ್ಲಿ ಸಲ್ಲಿಸಬೇಕು. ಮೇಲೆ ಕಾಣಿಸಿದ ಮುದ್ದತ್ತಿನ ದಿವಸ ನೀವು ನ್ಯಾಯಾಲಯದ ಮುಂದೆ ಹಾಜರಾಗದೇ ಇದ್ದಲ್ಲಿ ನಿಮ್ಮ ವಿರುದ್ಧ ಮಾನ್ಯ ನ್ಯಾಯಾಲಯದವರು ಏಕ ತರ್ಫೆ ಹುಕುಂನ್ನು ಮಾಡಲಾಗುವುದು ತಿಳಿಯಿರಿ.

ಈ ಹೊತ್ತು ದಿನಾಂಕ : 11.01.2022ನೇ ಇಸ್ವಿ ದಿವಸ ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ಕೊಡಲಾಯಿತು.

**ಸ್ಥಳ : ರಾಣೇಬೆನ್ನೂರು.**
**ದಿನಾಂಕ : 11.01.2022**
**ಸಹಿ/- ಸಿ.ಆರ್. ಪಾಟೀಲ**
**ಮೇಲ್ಮನವಿದಾರರ ಪರ ವಕೀಲರು**

**ನ್ಯಾಯಾಲಯದ ಅಪ್ಪಣೆಯ ಮೇರೆಗೆ**
**ಸಹಿ/- ಶಿರಸ್ತೇದಾರರು, ಮಾನ್ಯ 2ನೇ ಹೆಚ್ಚುವರಿ ಜಿಲ್ಲಾ ವ ಸತ್ರ ನ್ಯಾಯಾಧೀಶರು, ರಾಣೇಬೆನ್ನೂರು.**
**ಇವರ ನ್ಯಾಯಾಲಯದಲ್ಲಿ**

**IN THE COURT OF THE THIRD ADDITIONAL SENIOR CIVIL JUDGE, AT DAVANAGERE**

**O.S. 100/2021**

Plaintiff : **Sri B. Sridhar setty**
V/s
Defendants : **Sri Ramesh Maladkar and another,**
**Defendant No.2 : Tribhuvan Enterprises India Pvt Ltd., Davanagere, Represented by Its Managing Director Sri K.R. Jayaramaraju S/o K. Ramakrishanaraju,** Aged about 52 years, LIC Colony, Near Nutan College, Davanagere city.

**SUIT SUMMONS TO THE SECOND DEFENDANT BY SUBSTITUTED SERVICE BY MEANS OF PAPER PUBLICATION**

Whereas the above named plaintiff has filed the suit against the defendants for declaration that he is the owner in possession and enjoyment of the suit schedule property i.e. site No. 14, door No. 354/14, Situated in Yaragunte within the limites of City Corporation, Davanagere and for the consequential reliefs of permanent injuctiions. Now, the above case is posted to 15th day of Feb 2022 for appearance of the 2nd defendant.

Therefore, the 2nd defedant is called upon to take notice to appear in the above case on 15th day of Feb 2022 at 11 AM either personally or through an advocate, failing which all further proceeding will take place in your absence.

Given under my hand and seal on 11th day of Jan 2022 davanagere.

Place : Davanagere
Date: 11.01.2022

**By order of the Court**
**Chife Ministerial Officer, Principal Civil Judge Court, Davanagere**

## ಮೇಕೆದಾಟು ಯಾತ್ರೆಯ ಹಲವು ಮುಖಂಡರಿಗೆ ಕೊರೊನಾ ಸೋಂಕು

ಬೆಂಗಳೂರು, ಜ.12 - ಮೇಕೆದಾಟು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದ ಮಾಜಿ ಸಚಿವ ಹಾಗೂ ವಿಧಾಪರಿಷತ್ ಸದಸ್ಯ ಸಿ.ಎಂ. ಇಬ್ರಾಹಿಂ, ವಿಧಾನಸಭೆಯ ಮಾಜಿ ಉಪಾಧ್ಯಕ್ಷ ಹಾಗೂ ಹಾಲಿ ಶಾಸಕ ಶಿವಶಂಕರ್ ರೆಡ್ಡಿ ಸೇರಿದಂತೆ ಅನೇಕ ಶಾಸಕರು ಮುಖಂಡರು ಹಾಗೂ ಕಾರ್ಯಕರ್ತರಿಗೆ ಕೋವಿಡ್ ಸೋಂಕು ತಗಲಿದೆ.

ಈಗಾಗಲೇ ಮಾಜಿ ಸಚಿವ ಹೆಚ್.ಎಂ. ರೇವಣ್ಣ, ಮಾಜಿ ಶಾಸಕಿ ಮಲ್ಲಜಮ್ಮ ಸೇರಿದಂತೆ ಅನೇಕರಿಗೆ ಸೋಂಕು ತಗಲಿದ್ದು, ಅವರು ಬಹಿರಂಗವಾಗಿ ಹೇಳಿಕೊಂಡಿದ್ದಾರೆ.

ಪಾದಯಾತ್ರೆಯಿಂದ ಹಿಂತಿರುಗಿದ ನಂತರ ಕೆಲವರಲ್ಲಿ ಆರೋಗ್ಯದ ಏರುಪೇರು ಆಗಿ ಸೋಂಕು ಪರೀಕ್ಷೆಗೆ ಒಳಪಟ್ಟಾಗ ಅನೇಕ ಮುಖಂಡರು ಹಾಗೂ ಕಾರ್ಯಕರ್ತರಿಗೆ ಕೊರೊನಾ ತಗಲಿರುವುದು ಬಹಿರಂಗಗಗೊಂಡಿದೆ. ಇಷ್ಟಾದರೂ, ಪಾದಯಾತ್ರೆಯಲ್ಲಿ ಪಾಲ್ಗೊಂಡಿರುವ ಮುಖಂಡರಾಗಲಿ, ಕಾರ್ಯಕರ್ತರು ನಿಯಮಾವಳಿಗಳನ್ನು ಗಾಳಿಗೆ ತೂರಿ, ಹೆಜ್ಜೆ ಇಡುತ್ತಿದ್ದಾರೆ.

## ಮೆಕ್ಕೇಜೋಳ ಉತ್ಪನ್ನಕ್ಕೆ 17 ರಿಂದ ಇ-ಟೆಂಡರ್

ದಾವಣಗೆರೆ, ಜ.12- ದಾವಣಗೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣಕ್ಕೆ ಅವಕವಾಗುವ ಅಧಿಸೂಚಿತ ಕೃಷಿ ಹುಟ್ಟುವಳಿಯಾದ ಮೆಕ್ಕೇಜೋಳ ಉತ್ಪನ್ನವನ್ನು ಇ-ಟೆಂಡರ್ ನಡೆಸಲು ತೀರ್ಮಾನಿಸಾಗಿದೆ ಎಂದು ಎಪಿಎಂಸಿ ಕಾರ್ಯದರ್ಶಿ ತಿಳಿಸಿದ್ದಾರೆ.

ಇದೇ ದಿನಾಂಕ 17 ರಿಂದ ಪ್ರತಿದಿನ ಬೆಳಿಗ್ಗೆ 9 ರಿಂದ ಮಧ್ಯಾಹ್ನ 1 ಗಂಟೆಗೆ ಟೆಂಡರ್ ಘೋಷಣೆಯಾಗಲಿದೆ. ಇದರಿಂದ ರೈತರಿಗೆ ಸ್ಪರ್ಧಾತ್ಮಕ ಧಾರಣೆಗಳು ಸಿಗುವುದರಿಂದ ದಾವಣಗೆರೆ ಜಿಲ್ಲೆ ಹಾಗೂ ಇತರೆ ಜಿಲ್ಲೆಯ ರೈತರು ತಾವು ಬೆಳೆದ ಮೆಕ್ಕೆಜೋಳ ಉತ್ಪನ್ನವನ್ನು ಮಾರುಕಟ್ಟೆಗೆ ತಂದು ಇ-ಟೆಂಡರ್‌ನಲ್ಲಿ ಮಾರಾಟ ಮಾಡಿ, ಸದುಪಯೋಗ ಪಡೆದುಕೊಳ್ಳಲು ಮನವಿ ಮಾಡಿದ್ದಾರೆ.

## ವಿವೇಕಾನಂದರ ವೇಷಭೂಷಣ




ದಾವಣಗೆರೆ, ಜ. 12- ನಗರದ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ಸ್ವಾಮಿ ವಿವೇಕಾನಂದರ ಜನ್ಮದಿನೋತ್ಸವದ ಅಂಗವಾಗಿ ರಾಷ್ಟ್ರೀಯ ಯುವ ದಿನಾಚರಣೆ ಕಾರ್ಯಕ್ರಮ ಆಚರಿಸಲಾಯಿತು.

ಅಶೋಕ ಜಿ, ಸಂಸ್ಥೆಯ ಕಾರ್ಯದರ್ಶಿ ಜಯಣ್ಣ ಜಿ, ಸಂಸ್ಥೆಯ ಸದಸ್ಯರಾದ ವಿನಾಯಕ ರಾನಡೆ ಜೀ, ಪ್ರಾಂಶುಪಾಲ ಮಂಜುನಾಥಜೀ, ಶೈಕ್ಷಣಿಕ ಸಂಯೋಜಕ ಶಿವರಾಜ ಜೀ ಉಪಸ್ಥಿತರಿದ್ದರು.

ವಿದ್ಯಾರ್ಥಿ ಆದಿತ್ಯ ಹಾಗೂ ನಿಕ್ಷೇಪ್ ಸ್ವಾಮಿ ವಿವೇಕಾನಂದರ ವೇಷಭೂಷಣವನ್ನು ಧರಿಸಿದ್ದರು. ಹಾಗೆಯೇ ಚಿನ್ಮಯಿ ಎಸ್ ದಾಸ್ ವಿದ್ಯಾರ್ಥಿನಿ ವಿವೇಕಾನಂದರ ಜೀವನ ಚರಿತ್ರೆಯನ್ನು ಕುರಿತು ಕಿರು ಭಾಷಣ ಮಾಡಿದರು. ಕೆ.ಎಸ್. ಪವಿತ್ರ ನಿರೂಪಿಸಿದರು. ಪಿ.ಜೆ. ಶೃತಿ ಸ್ವಾಗತಿಸಿದರು. ಕಾವೇರಿ ವಂದಿಸಿದರು.

# ಸಾಲ, ಆತ್ಮಹತ್ಯೆ : ರೈತನ ಶವವಿಟ್ಟು ಪ್ರತಿಭಟನೆ



ರಾಣೇಬೆನ್ನೂರು, ಜ.12- ತಾಲೂಕಿನ ಚಿಕ್ಕಕುರವತ್ತಿ ಗ್ರಾಮದ ರೈತ ಪರಮೇಶಪ್ಪ ಶೇಖರಪ್ಪ ಹಲಗೇರಿ, ಸಾಲ ತೀರಿಸಲಾಗದೆ ಮರ್ಯಾದೆಗೆ ಅಂಜಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದು, ಇಡೀ ರೈತ ಕುಲ ಆತಂಕದಲ್ಲಿ ಸಿಲುಕಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ಸಂಘಟನಾ ಕಾರ್ಯದರ್ಶಿ ರವೀಂದ್ರಗೌಡ ಎಫ್. ಪಾಟೀಲ ದೂರಿದ್ದಾರೆ.

ಮೃತ ಪರಮೇಶಪ್ಪನ ಶವವನ್ನು ನಗರದ ಬಸ್‌ಸ್ಟ್ಯಾಂಡ್ ಹತ್ತಿರ ಪಿ.ಬಿ. ರಸ್ತೆಯಲ್ಲಿ ಇಟ್ಟುಕೊಂಡು ಪ್ರತಿಭಟಿಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಮೃತನ ಕುಟುಂಬಕ್ಕೆ ಸರ್ಕಾರ ಕೂಡಲೇ 25 ಲಕ್ಷ ರೂಪಾಯಿ ಪರಿಹಾರ ಘೋಷಿಸಬೇಕು ಎಂದು ಒತ್ತಾಯಿಸಲಾಯಿತು.

ರೈತರ ಆತ್ಮಹತ್ಯೆ ಪ್ರಕರಣಗಳನ್ನು ತಡೆಗಟ್ಟಬೇಕಾದರೆ ರೈತರ ಸಂಪೂರ್ಣ ಸಾಲಮನ್ನಾ ಮಾಡಬೇಕೆಂದು ಅವರು ಸರ್ಕಾರವನ್ನು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮೃತ ರೈತನ ಹಂಡತಿ ಗೀತವ್ವ ಹಲಗೇರಿ, ರೈತ ಮುಖಂಡರಾದ ಇಕ್ಬಲಾಸಾಬ್ ಶೇಖಸಂದಿ, ಧರ್ಮಣ್ಣ ಕುಪ್ಪೇಲೂರ, ಚಂದ್ರಣ್ಣ ಬೇಡರ, ನ್ಯಾಯವಾದಿ ಎಸ್.ಡಿ. ಹಿರೇಮಠ, ನಿತ್ಯಾನಂದ ಕುಂದಾಪುರ, ಸಿದ್ದಪ್ಪ ಹಲಗೇರಿ, ಮಳ್ಳಪ್ಪ ಹಲಗೇರಿ, ಜಯ್ಯಪ್ಪ ಕಂಪಗೌಡ್ರ, ಹರಿಹರಗೌಡ ಪಾಟೀಲ, ದಿಳ್ಳೆಪ್ಪ ಸತ್ಯಪ್ಪನವರ, ದಿನಗೂಲಿ ನೌಕರರ ಸಂಘದ ಅಧ್ಯಕ್ಷ ಬಸವರಾಜ ಕೊಂಗಿಯವರ, ಜಮಾಲಸಾಬ್ ಶೇಖಸಂದಿ, ಜಗದೀಶ ಕೆರೂಡಿ, ರಾಜು ಓಲೆಕಾರ

**ರಾಣೇಬೆನ್ನೂರು**

ಮುಂತಾದವರು ಭಾಗವಹಿಸಿ 1 ತಾಸಿಗೂ ಹೆಚ್ಚು ಕಾಲ ಪ್ರತಿಭಟನೆ ನಡೆಸಿದರು.

ಪ್ರತಿಭಟನಾ ಸ್ಥಳಕ್ಕೆ ಉಪತಹಶೀಲ್ದಾರ ಹಾದಿಮನಿ ಮತ್ತು ಸಹಾಯಕ ಕೃಷಿ ನಿರ್ದೇಶಕ ಗೌಡಪ್ಪಗೌಡ್ರ ಆಗಮಿಸಿ ಮನವಿ ಸ್ವೀಕರಿಸಿದರು.

## ಹೊನ್ನಾಳಿಯಲ್ಲಿ ರೈತರ ಪ್ರತಿಭಟನೆ

ಹೊನ್ನಾಳಿ, ಜ. 12- ಉದ್ಯೋಗ ಖಾತ್ರಿ ಯೋಜನೆಯಡಿ ಅಡಿಕೆ ತೋಟ, ಕೊಟ್ಟಿಗೆಗಳನ್ನು ನಿರ್ಮಿಸಿಕೊಳ್ಳಲು ಸರಕಾರ ಅವಕಾಶ ನೀಡಿದೆ. ಆದರೆ, ತಾಲೂಕಿನ ಹನುಮಸಾಗರ ಗ್ರಾಪಂ ವ್ಯಾಪ್ತಿಯಲ್ಲಿ ಕೆಲವರ ಕುತಂತ್ರದಿಂದಾಗಿ ಕಾಮಗಾರಿ ಅನುಷ್ಠಾನವಾಗುತ್ತಿಲ್ಲ ಎಂದು ಆರೋಪಿಸಿ, ಹನುಮಸಾಗರ ಗ್ರಾಮದ ರೈತರು ಪಟ್ಟಣದ ತಾಪಂ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ತಾಂತ್ರಿಕ ತೊಂದರೆಯಿಂದಾಗಿ ಕಂಪ್ಯೂಟರ್ ಲಾಕ್ ಆಗಿತ್ತು. ಅದನ್ನು ಸರಿಪಡಿಸಲಾಗಿದೆ. ರೈತರು ಆತಂಕವಿಲ್ಲದೇ ಖಾತ್ರಿ ಯೋಜನೆಯಡಿ ಕಾಮಗಾರಿ ಮಾಡಿಕೊಳ್ಳಬಹುದು ಎಂದು ತಾಪಂ ಇಒ ರಾಮಭೋವಿ ತಿಳಿಸಿದರು.

ಹನುಮಸಾಗರ ಗ್ರಾಪಂ ಅಧ್ಯಕ್ಷೆ ಬಸಮ್ಮ ನಾಗರಾಜ್, ರೈತರಾದ ಷಣ್ಮುಖಪ್ಪ ಬಳ್ಳೇಶ್ವರ, ಭರಮಪ್ಪ ಬಳ್ಳೇಶ್ವರ, ಮಂಜು ಹನುಮಸಾಗರ ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಜನಪದ ಸಂಗೀತ ಸಂಕ್ರಾಂತಿ, ಔತಣಕೂಟ



ಹರಪನಹಳ್ಳಿ, ಜ.12- ಮಾಜಿ ಶಾಸಕ ಎಂ.ಪಿ.ರವೀಂದ್ರ ಪ್ರತಿಷ್ಠಾನದಿಂದ ನಿಟ್ಟೂರು ಗ್ರಾಮದ ಮರಳು ಪಾಯಿಂಟ್ ಬಳಿ ನಾಡಿದ್ದು ದಿನಾಂಕ 14ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಮಕರ ಸಂಕ್ರಾಂತಿಯ ಔತಣಕೂಟ, ಜನಪದ ಸಂಗೀತ ಸಂಕ್ರಾಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕೆಪಿಸಿಸಿ ಮಹಿಳಾ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

## ಚಿಲ್ಲರೆ ಹಣದುಬ್ಬರ ಆರು ತಿಂಗಳಲ್ಲೇ ಹೆಚ್ಚು

ನವದೆಹಲಿ, ಜ. 12 – ಚಿಲ್ಲರೆ ಹಣದುಬ್ಬರ ಡಿಸೆಂಬರ್ ತಿಂಗಳಲ್ಲಿ ಕಳೆದ 6 ತಿಂಗಳಲ್ಲೇ ಶೇ.5.59ಕ್ಕೆ ತಲುಪಿದೆ. ನವೆಂಬರ್ 2021ರಲ್ಲಿ ಹಣದುಬ್ಬರ ಸೂಚ್ಯಂಕ ಶೇ.4.91ರಷ್ಟು ಹಾಗೂ ಡಿಸೆಂಬರ್ 2020ರಂದು ಶೇ.4.59ರಷ್ಟಿತ್ತು.

# ವಿವಾಹ ವಯಸ್ಸು 21ನೇ ವರ್ಷಕ್ಕೆ ಹೆಚ್ಚಳ : ಚರ್ಚಾಗೋಷ್ಠಿ



ದಾವಣಗೆರೆ, ಜ. 12- ನಗರದ ಜಾಗೃತ ಮಹಿಳಾ ಸಂಘದ ವತಿಯಿಂದ ಭಾರತ ಸರ್ಕಾರವು ಮಹಿಳೆಯರ ವಿವಾಹದ ವಯಸ್ಸನ್ನು 18 ವರ್ಷದಿಂದ 21 ವರ್ಷಕ್ಕೆ ಹೆಚ್ಚಿಸುವುದರ ವಿಚಾರವಾಗಿ ಚರ್ಚಾಗೋಷ್ಠಿ ಹಮ್ಮಿಕೊಳ್ಳಲಾಗಿತ್ತು.

ಈ ಚರ್ಚಾಗೋಷ್ಠಿಯಲ್ಲಿ 18 ವರ್ಷ ಮತ್ತು 21 ವರ್ಷದ ಪರ ಎಂಬ ಎರಡು ಗುಂಪುಗಳನ್ನು ರಚಿಸಿ 18 ಮತ್ತು 21 ರ ವಯಸ್ಸಿನ ಅನುಕೂಲ ಮತ್ತು ಅನಾನುಕೂಲಗಳ ಬಗ್ಗೆ ಕೂಲಂಕುಶವಾಗಿ ಚರ್ಚಿಸಲಾಯಿತು.

ಕಾರ್ಯದರ್ಶಿ ಶ್ರೀಮತಿ ಅಮೀನಾ ಭಾನು, ಉಪಾಧ್ಯಕ್ಷರಾದ ಶ್ರೀಮತಿ ಉಮಾ ವೀರಭದ್ರಪ್ಪ, ಸದಸ್ಯರುಗಳಾದ ಶ್ರೀಮತಿ ಶಾಂತಮ್ಮ ದಿಳ್ಳೆಪ್ಪ, ಶ್ರೀಮತಿ ಆಶಾ ಕಲ್ಲನಗೌಡರ, ಶ್ರೀಮತಿ ಗೀತಾ ಮಾರುತೇಶ್, ಶ್ರೀಮತಿ ಸತ್ಯಭಾಮ ಮಂಜುನಾಥ, ವಕೀಲರಾದ ಶ್ರೀಮತಿ ಭಾಗ್ಯ ಜೆ ಎಸ್, ಶ್ರೀಮತಿ ಎಂ.ಎನ್. ಮಧುರ, ಪ್ರಾಧ್ಯಾಪಕರುಗಳಾದ ಶ್ರೀಮತಿ ದೀಪಾ ಬಿಎಸ್, ಜಯರಾಜ್, ವೇದ ವರ್ಮ, ಶ್ರೀಮತಿ ಅನ್ನಪೂರ್ಣ ಪಾಟೀಲ್, ಡಾ. ಅನಿತಾ ದೊಡ್ಡಗೌಡರ್, ಶ್ರೀಮತಿ ಸುಭಾಷಿಣಿ ಮಂಜುನಾಥ, ಸಾಮಾಜಿಕ ಕಾರ್ಯಕರ್ತ ತಜ್ ಮುಲ್ ಅಹಮದ್, ಮಹೇಶ್ ಕುಮಾರ್, ಆಪ್ತ ಸಮಾಲೋಚಕರಾದ ಶ್ರೀಮತಿ ಕೆ.ಬಿ. ಸುಮಾ, ಎಸ್. ಕುಮಾರ, ಶ್ವೇತಾ, ಸಿಬ್ಬಂದಿಗಳಾದ ಶ್ರೀಮತಿ ಮಮತಾ, ಶ್ರೀಮತಿ ಹೇಮಲತಾ, ನಿಶ್ಚಿತಾ, ಸಂಪನ್ಮೂಲ ವ್ಯಕ್ತಿಗಳಾಗಿದ್ದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ನಿವೃತ್ತ ಪ್ರಾಂಶುಪಾಲ ಬಸವರಾಜ್ ಎರಡು ತಂಡಗಳ ಚರ್ಚೆಯನ್ನು ಆಲಿಸಿ 21ವರ್ಷ ಸೂಕ್ತ ಎಂದು ಅಭಿಪ್ರಾಯಪಟ್ಟರು.

## 20 ಅಡಿ ಉದ್ದದ ವಿವೇಕಾನಂದರ ಚಿತ್ರ ರಚಿಸಿದ ವಿದ್ಯಾರ್ಥಿಗಳು



ದಾವಣಗೆರೆ, ಜ.12- ವೀರ ಸನ್ಯಾಸಿ ವಿವೇಕಾನಂದರ 159 ನೇ ಜಯಂತಿ ಹಾಗೂ ಯುವದಿನದ ಪ್ರಯುಕ್ತ ಸ್ಥಳೀಯ ವಿನೋಬನಗರದ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯಲ್ಲಿ ವಿವೇಕಾನಂದರ ಚಿತ್ರ ಬಿಡಿಸುವ ಮೂಲಕ ಆಚರಿಸಲಾಯಿತು.

ಮುರುಘರಾಜೇಂದ್ರ ಯೋಗ ಕೇಂದ್ರದವರು ಮಕ್ಕಳಿಗೆ ಸೂರ್ಯ ನಮಸ್ಕಾರವನ್ನು ತಿಳಿಸಿಕೊಡುವ ಸಮಯದಲ್ಲಿ ಶಾಲೆಯ 5 ವಿದ್ಯಾರ್ಥಿಗಳಾದ ಪ್ರಜ್ವಲ್ ಸಾಕ್ರೆ, ಹರೀಶ್, ಅಜಯ್ ಡಿ.ಎಸ್., ಮಣಿಕಂಠ, ಆಕಾಶ್ ಎಂ. ವಿದ್ಯಾರ್ಥಿಗಳು 20 ಅಡಿ ಉದ್ದ, 16 ಅಡಿ ಅಗಲದ ಇಟ್ಟಿಗೆ ತುಂಡುಗಳಿಂದ ವಿವೇಕಾನಂದರ ಭಾವಚಿತ್ರಣವನ್ನು ಚಿತ್ರಕಲಾ ಶಿಕ್ಷಕ ಶಾಂತಯ್ಯ ಪರಡಿಮಠ ಅವರ ಮಾರ್ಗದರ್ಶನದಲ್ಲಿ, ಮುಖ್ಯೋಪಾಧ್ಯಾಯರ ಪ್ರೋತ್ಸಾಹ ಶಿಕ್ಷಕರಾದ ಹೆಚ್.ಬಿ. ಜ್ಯೋತಿ, ಜಿ.ಎಂ. ಪ್ರಭುದೇವ್, ಕೆ. ಹಾಲಪ್ಪ, ಲಿಂಗರಾಜ್, ಕೆ.ಪಿ. ರುದ್ರೇಶ್‌ಮೂರ್ತಿ ಸಹಕಾರದಿಂದ ರಚಿಸಲಾಯಿತು.

ಸಂಸ್ಥೆಯ ಶಿಕ್ಷಣ ಸಂಯೋಜಕರಾದ ಆರ್. ವಾಗ್ದೇವಿ ಹಾಗೂ ಮುರುಘರಾಜೇಂದ್ರ ಯೋಗ ಕೇಂದ್ರದ ಸದಸ್ಯರು ಉಪಸ್ಥಿತರಿದ್ದರು.

## ಪಿಐಬಿ ಗುರುತಿನ ಚೀಟಿಗಳ ಅವಧಿ ವಿಸ್ತರಣೆ

ನವದೆಹಲಿ, ಜ. 12 – ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಪತ್ರಕರ್ತರಿಗೆ 2021ರಲ್ಲಿ ವಿತರಿಸಿರುವ ಪಿ.ಐ.ಬಿ. ಮಾನ್ಯತಾ ಗುರುತಿನ ಚೀಟಿಗಳ ಅವಧಿಯನ್ನು ವಿಸ್ತರಿಸಲಾಗಿದೆ. ಇವುಗಳ ಅವಧಿಯನ್ನು ಜನವರಿ 31,2022ರಿಂದ ಏಪ್ರಿಲ್ 30, 2022ರವರೆಗೆ ವಿಸ್ತರಿಸಲಾಗಿದೆ.

ಭಾರತದ ಅತ್ಯಂತ ವಿಶ್ವಾಸಾರ್ಹ ಸೋಲಾರ್ ಬ್ರಾಂಡ್
Sudarshan Saur®
ತಿಂಗಳ ಸುಲಭ ಕಂತುಗಳಲ್ಲಿ ಲಭ್ಯ
ಬುದ್ಧಿವಂತಿಕೆಯ ಆಲೋಚನೆ
ಸಂಕ್ರಾಂತಿ ಹಬ್ಬದ ಶುಭಾಶಯಗಳು


ದಾವಣಗೆರೆ ತಾಲ್ಲೂಕುಗಳಿಗೆ ಡೀಲರ್ಸ್ ಬೇಕಾಗಿದ್ದಾರೆ
PEACE ENTERPRISES
SUPER STOCKIST : DAVANAGERE
Ganesh Temple Building, Opp. Bakkeshwara High School,
Nijalingappa Layout, Davanagere. E-mail ID : peacedvgmarketing@gmail.com
8310042490, 9901318277, 9880156667.

ಪ್ರಥಮ ವರ್ಷದ ಪುಣ್ಯಸ್ಮರಣೆ

ಲಿಂಗೈಕ್ಯ ಶ್ರೀಮತಿ ಪ್ರೀತಿ ರವಿಕುಮಾರ್
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಆರೈಕೆ ಆಸ್ಪತ್ರೆ, ಹದಡಿ ರಸ್ತೆ, ದಾವಣಗೆರೆ.
ನೀವು ನಮ್ಮನ್ನಗಲಿ ಒಂದು ವರ್ಷವಾಯಿತು... ಸದಾ ನಿಮ್ಮ ನೆನಪಿನಲ್ಲಿರುವ...
ಶ್ರೀಮತಿ ಮೇಘನಾ ಮತ್ತು ಪವಿತ್ರ ಎಸ್.ಕೆ. ಹಾಗೂ ಕು|| ಗೌರಿ, ಚಿ|| ಸಮನ್ಯೂ
ನಿರ್ದೇಶಕರು : ರೈತರ ಫಸಲುಗಳ ಪರಿವರ್ತನ ಮತ್ತು ವ್ಯಾಪಾರೋಧ್ಯಮ ಸಹಕಾರ ಸಂಘ ನಿ.,
ನಿರ್ದೇಶಕರು : ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದಾವಣಗೆರೆ.
ಅಧ್ಯಕ್ಷರು : ಶ್ರೀ ಕಲ್ಲೇಶ್ವರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ.,
ಶ್ರೀಮತಿ ಶ್ವೇತಾ ಮತ್ತು ಪ್ರದೀಪ್ ಎಸ್.ಕೆ.
ಶಾಮನೂರು ವಂಶಸ್ಥರು ಹಾಗೂ ಬಂಧು-ಮಿತ್ರರು.
ಶಾಮನೂರು ಸಂಗಪ್ಪ & ಸನ್ಸ್, ದಾವಣಗೆರೆ.


ವಾರ್ಡ್ ನಂ.39ರ ವಿವಿಧ ಕಾಮಗಾರಿಗಳ ಭೂಮಿ ಪೂಜೆ ಕಾರ್ಯಕ್ರಮ
ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯಡಿಯಲ್ಲಿ
ವಾರ್ಡ್ ನಂ. 39ರ ವ್ಯಾಪ್ತಿಯಲ್ಲಿ ಬರುವ ವಿವಿಧ ಕಾಮಗಾರಿಗಳ ಭೂಮಿ ಪೂಜೆ ಸಮಾರಂಭ
ಶ್ರೀ ಎಸ್.ಎ. ರವೀಂದ್ರನಾಥ್ ಮಾನ್ಯ ಶಾಸಕರು, ದಾವಣಗೆರೆ ಉತ್ತರ ವಿಧಾನ ಸಭಾ ಕ್ಷೇತ್ರ
ಡಾ. ಜಿ.ಎಂ.ಸಿದ್ದೇಶ್ವರ ಮಾನ್ಯ ಸಂಸದರು, ದಾವಣಗೆರೆ ಲೋಕಸಭಾ ಕ್ಷೇತ್ರ
ಶ್ರೀ ಭೈರತಿ ಬಸವರಾಜ್ ನಗರಾಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು, ದಾವಣಗೆರೆ
ದಿನಾಂಕ : 13.01.2022 ಸಮಯ: ಮಧ್ಯಾಹ್ನ 12 ಗಂಟೆಗೆ
ಸ್ಥಳ: ಕಲ್ಲೇಶ್ವರ ಅಪಾರ್ಟ್‌ಮೆಂಟ್ ಮುಂಭಾಗ , 17ನೇ ಕ್ರಾಸ್ , ತರಳಬಾಳು ಬಡಾವಣೆ, ದಾವಣಗೆರೆ.
ಒಟ್ಟು ಅಂದಾಜು ಮೊತ್ತ : 1 ಕೋಟಿ 60 ಲಕ್ಷ

ಶ್ರೀಮತಿ ಗೀತಾ ದಿಳ್ಯೆಪ್ಪ
ಅಧ್ಯಕ್ಷರು, ಲೆಕ್ಕ ಪತ್ರ ಸ್ಥಾಯಿ ಸಮಿತಿ
ಮಹಾನಗರ ಪಾಲಿಕೆ, ದಾವಣಗೆರೆ
ಬಿ.ದಿಳ್ಯೆಪ್ಪ
ಬಿಜೆಪಿ ಮುಖಂಡರು
ವಿದ್ಯಾನಗರ 39ನೇ ವಾರ್ಡ್
ವಿನಯ್ ದಿಳ್ಯೆಪ್ಪ
ಬಿಜೆಪಿ ಮುಖಂಡರು
ವಿದ್ಯಾನಗರ, 39ನೇ ವಾರ್ಡ್
ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಆಗಮಿಸಿ ಯಶಸ್ವಿಗೊಳಿಸಬೇಕೆಂದು ಕೋರುತ್ತೇವೆ
39ನೇ ವಾರ್ಡ್ ಸಮಸ್ತ ನಾಗರಿಕರು

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte